# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

ಸಂ/ಕರಾಸಾ/ಮಂಡ್ಯ.ವಿ/ಸಂ/ವಾ/744/2023–24 ದಿನಾಂಕ:–12/02/2024

**ಸಂಧಾನ ಪ್ರಕಟಣೆ ಸಂ:14/2023–24**

ಕ.ರಾ.ರ.ಸಾ.ನಿಗಮ ಮಂಡ್ಯ ವಿಭಾಗಕ್ಕೆ ಸೇರಿದ ಈ ಕೆಳಗಿನ ವಾಹನ ನಿಲ್ದಾಣಗಳಲ್ಲಿ ಖಾಲಿಯಿರುವ, ವಾಣಿಜ್ಯ ಮಳಿಗೆಗೆ ಪರವಾನಗಿದಾರರನ್ನು ಸಂಧಾನದ ಮೂಲಕ ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ವಿವರ ಈ ಕೆಳಕಂಡಂತಿವೆ.

**ಸಂಧಾನಕ್ಕೆ ಒಳಪಡುವ ಮಳಿಗೆಗಳ ವಿವರ:**

| ಕ್ರ. ಸಂ. | ಬಸ್ ನಿಲ್ದಾಣ | ಮಳಿಗೆ ವಿವರ | ವಿಸ್ತೀರ್ಣ ಚ.ಅಡಿ ಗಳಲ್ಲಿ | ಅವಧಿ | ಮಾಸಿಕ ಪರವಾನಗಿ ಶುಲ್ಕ(ಜಿಎಸ್‌ಟಿ ಹೊರತುಪಡಿಸಿ) ರೂ.ಗಳಲ್ಲಿ | ಇ.ಎಂ.ಡಿ | ಅರ್ಜಿ ಶುಲ್ಕ (ಜಿಎಸ್‌ಟಿ ಸೇರಿ) ರೂ.ಗಳಲ್ಲಿ |
|---|---|---|---|---|---|---|---|
| 1 | ಕಿಕ್ಕೇರಿ | ಉಪಹಾರ ಗೃಹ | 466.55 | 5 ವರ್ಷ | – | 4,356.00 | 118.00 |
| 2 | ಮದ್ದೂರು | ಜನರಲ್ ಸ್ಟಾಲ್–07 | 105 | 5 ವರ್ಷ | – | 48,576.00 | 191.00 |
| 3 | ಬನ್ನೂರು | ದ್ವಿ–ಚಕ್ರ ವಾಹನ ನಿಲ್ದಾಣ(ತೆರೆದ ಸ್ಥಳ) | 1886.25 | 3 ವರ್ಷ | – | 25,200.00 | 118.00 |
| 4 | ಪಾಂಡವಪುರ | ಜನರಲ್ ಸ್ಟಾಲ್–05 | 219.55 | 5 ವರ್ಷ | – | 65,865.00 | 260.00 |
| 5 | ಮೇಲುಕೋಟೆ | ಜನರಲ್ ಸ್ಟಾಲ್–01 | 198.04 | 5 ವರ್ಷ | – | 5,940.00 | 118.00 |
| 6 | ಮೇಲುಕೋಟೆ | ಜನರಲ್ ಸ್ಟಾಲ್–02 | 198.04 | 5 ವರ್ಷ | – | 4,428.00 | 118.00 |
| 7 | ಮೇಲುಕೋಟೆ | ಜನರಲ್ ಸ್ಟಾಲ್–03 | 198.04 | 5 ವರ್ಷ | – | 8,169.00 | 118.00 |
| 8 | ಮೇಲುಕೋಟೆ | ಜನರಲ್ ಸ್ಟಾಲ್–04 | 198.04 | 5 ವರ್ಷ | – | 7,623.00 | 118.00 |
| 9 | ಜಕ್ಕನಹಳ್ಳಿ | ಜನರಲ್ ಸ್ಟಾಲ್–03 | 159.96 | 5 ವರ್ಷ | – | 14,034.00 | 118.00 |
| 10 | ಜಕ್ಕನಹಳ್ಳಿ | ಉಪಹಾರ ಗೃಹ | 1049.95 | 5 ವರ್ಷ | – | 73,680.00 | 290.00 |
| 11 | ನಾಗಮಂಗಲ | ಉಪಹಾರ ಗೃಹ | 1560.20 | 5 ವರ್ಷ | – | 12,603.00 | 118.00 |
| 12 | ನಾಗಮಂಗಲ | ಜನರಲ್ ಸ್ಟಾಲ್–01 | 87.72 | 5 ವರ್ಷ | – | 6,930.00 | 118.00 |
| 13 | ನಾಗಮಂಗಲ | ಜನರಲ್ ಸ್ಟಾಲ್–03 | 124.86 | 5 ವರ್ಷ | – | 37,458.00 | 148.00 |
| 14 | ಶ್ರೀರಂಗಪಟ್ಟಣ | ಜನರಲ್ ಸ್ಟಾಲ್–05 | 178.88 | 5 ವರ್ಷ | – | 53,664.00 | 211.00 |
| 15 | ಶ್ರೀರಂಗಪಟ್ಟಣ | ಜನರಲ್ ಸ್ಟಾಲ್–08 | 227.57 | 5 ವರ್ಷ | – | 40,848.00 | 161.00 |
| 16 | ಕೆ.ಆರ್.ಪೇಟೆ | ಜನರಲ್ ಸ್ಟಾಲ್–03 | 105.68 | 5 ವರ್ಷ | – | 35,625.00 | 140.00 |
| 17 | ಕೆ.ಆರ್.ಪೇಟೆ | ಜನರಲ್ ಸ್ಟಾಲ್–04 | 144.03 | 5 ವರ್ಷ | – | 28,875.00 | 118.00 |
| 18 | ಕೆ.ಆರ್.ಪೇಟೆ | ಜನರಲ್ ಸ್ಟಾಲ್–05 | 142.16 | 5 ವರ್ಷ | – | 28,500.00 | 118.00 |
| 19 | ಕೆ.ಆರ್.ಪೇಟೆ | ಜನರಲ್ ಸ್ಟಾಲ್–06 | 137.01 | 5 ವರ್ಷ | – | 27,600.00 | 118.00 |
| 20 | ಕೆ.ಆರ್.ಪೇಟೆ | ಜನರಲ್ ಸ್ಟಾಲ್–07 | 143.09 | 5 ವರ್ಷ | – | 28,800.00 | 118.00 |
| 21 | ಕೆ.ಆರ್.ಪೇಟೆ | ಜನರಲ್ ಸ್ಟಾಲ್–08 | 171.15 | 5 ವರ್ಷ | – | 34,500.00 | 136.00 |
| 22 | ಕೆ.ಆರ್.ಪೇಟೆ | ಜನರಲ್ ಸ್ಟಾಲ್–10 | 146.37 | 5 ವರ್ಷ | – | 29,400.00 | 118.00 |
| 23 | ಕೆ.ಆರ್.ಪೇಟೆ | ಜನರಲ್ ಸ್ಟಾಲ್–11 | 146.37 | 5 ವರ್ಷ | – | 29,400.00 | 118.00 |
| 24 | ಕೆ.ಆರ್.ಪೇಟೆ | ಚಾಟ್ಸ್ ಸೆಂಟರ್ ಮಳಿಗೆ ಸಂಖ್ಯೆ–02 | 270.61 | 5ವರ್ಷ | 9,983.00 | 29,949.00 | 118.00 |
| 25 | ಮದ್ದೂರು (ಮೈಸೂರು–ಬೆಂಗಳೂರು ಹೆದ್ದಾರಿ ಪಕ್ಕ) | ಮಿಡ್ ವೇ–ಪ್ಲಾಜಾ(5 ಕಟ್ಟಡ(ಶಾಶ್ವತ) ಮಳಿಗೆಗಳು+ಉಪಹಾರ ಗೃಹದ(ಶಾಶ್ವತ) ಕಟ್ಟಡ +2000ಚದರ ಅಡಿ ವಿಸ್ತೀರ್ಣದಲ್ಲಿ ಜಾಹಿರಾತು ಅಳವಡಿಸಿಕೊಳ್ಳಲು+ಶೌಚಾಲಯ/ಮೂತ್ರಾಲಯ/ಪ್ಲಾಜಾದ ಆವರಣ/ಪಾರ್ಕಿಂಗ್ ಆವರಣದ ಸ್ವಚ್ಛತಾ ನಿರ್ವಹಣೆ ಸೇರಿದಂತೆ) | 53002.00 | 5ವರ್ಷ | 8,41,250.00 | 25,23,750.00 | 3540.00 |
| 26 | ಶ್ರೀರಂಗಪಟ್ಟಣ | ಜನರಲ್ ಸ್ಟಾಲ್–04 | 127.72 | 5ವರ್ಷ | 9,809.00 | 29,427.00 | 118.00 |
| 27 | ಕೊಪ್ಪ | ಜನರಲ್ ಸ್ಟಾಲ್–2 (10.06.2024ರಿಂದ ಖಾಲಿಯಾಗಲಿದೆ.) | 121.81 | 5ವರ್ಷ | 4,905.00 | 14,715.00 | 118.00 |
| 28 | ಕೊಪ್ಪ | ಜನರಲ್ ಸ್ಟಾಲ್–3 | 125.61 | 5ವರ್ಷ | 5,191.00 | 15,573.00 | 118.00 |
| 29 | ಕೊಪ್ಪ | ದ್ವಿ–ಚಕ್ರ ವಾಹನ ನಿಲ್ದಾಣ (ತೆರೆದ ಸ್ಥಳ) | 3229.73 | 3ವರ್ಷ | 6,032.00 | 18,096.00 | 118.00 |

| ಕ್ರ. ಸಂ. | ವಿವರ | ದಿನಾಂಕ | ಸಮಯ |
|---|---|---|---|
| 1. | ಅರ್ಜಿದಾರರು ಸಂಧಾನದ ಅರ್ಜಿಯೊಂದಿಗೆ ಅರ್ಜಿ ಶುಲ್ಕ ಹಾಗೂ ಇಎಂಡಿ ಶುಲ್ಕದ ಮೂಲ ಡಿ.ಡಿ.ಗಳನ್ನು ಹಾಗೂ ಅಗತ್ಯ ದಾಖಲಾತಿಗಳ ಪ್ರತಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಮಂಡ್ಯ ವಿಭಾಗೀಯ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಕಛೇರಿ ಸಮಯದಲ್ಲಿ ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ | ದಿ:04.03.2024ರ ಸಮಯ 10.30 ರಿಂದ ದಿ:04.03.2024ರ ಸಮಯ 17.00 ರವರೆಗೆ | |
| 2. | ಸಂಧಾನ ನಡೆಸುವ ದಿನಾಂಕ ಮತ್ತು ಸಮಯ(ಮೂಲ ಪ್ರತಿಗಳೊಂದಿಗೆ ಹಾಜರಾಗುವುದು) | ದಿ:05.03.2024 | 11.30am |

ಸಂಧಾನದ ದಸ್ತಾವೇಜುಗಳನ್ನು ನಿಗಮದ ವೆಬ್ ಸೈಟ್ "http://ksrtc.karnataka.gov.in" ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ ಮಂಡ್ಯ ವಿಭಾಗ, ಮಂಡ್ಯ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ ಮತ್ತು ಸಂಪರ್ಕಿಸುವ ದೂರವಾಣಿ ಸಂಖ್ಯೆ–7760990652, 7760990661, 7337680837ಗಳಿಗೆ ಕರೆ ಮಾಡಬಹುದಾಗಿದೆ.

ಸಹಿ/–

ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ.ನಿಗಮ,ಮಂಡ್ಯ ವಿಭಾಗ, ಮಂಡ್ಯ

ಗೌರವ ಪೂರ್ವಕವಾಗಿ ಪ್ರತಿಯನ್ನು:–

1. ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.
2. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿ, ವಾ.ಕ.ರ.ಸಾ.ನಿ, ಈ.ಕ.ರ.ಸಾ.ನಿ, ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

ಪ್ರತಿಯನ್ನು:–

1. ಘಟಕ ವ್ಯವಸ್ಥಾಪಕರು ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ,ಆರ್.ಪೇಟೆ ಹಾಗೂ ಪಾಂಡವಪುರ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ, ಹಾಗೂ ಹಾಗೂ ಘಟಕ ವ್ಯವಸ್ಥಾಪಕರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಸಂಚಾರ ಶಾಖೆಗೆ ನೀಡುವುದು ಹಾಗೂ ಸಂಧಾನ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.
2. ವಿಭಾಗೀಯ ಸಂಚಲನಾಧಿಕಾರಿ/ಕಾನೂನು ಅಧಿಕಾರಿ/ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ವಿಭಾಗರವರ ಮಾಹಿತಿಗಾಗಿ ಮತ್ತು ಮೇಲೆ ತಿಳಿಸಲಾದ ಸಂಧಾನ ನಡೆಯುವ ದಿನಾಂಕ ಮತ್ತು ಸಮಯಕ್ಕೆ ಹಾಜರಿರಲು ತಿಳಿಸಲಾಗಿದೆ ಹಾಗೂ ಸ.ಅ.ರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಸಂಧಾನ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.

**ಕ.ರಾ.ರ.ಸಾ.ನಿಗಮ, ಮಂಡ್ಯ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳ ಸಂಧಾನದ ಷರತ್ತು ಮತ್ತು ನಿಬಂಧನೆಗಳು.**

1. ಬಿಡ್‌ದಾರರು ನಿಗದಿತ ಅರ್ಜಿ ಶುಲ್ಕದ ಮೊತ್ತವನ್ನು ಮತ್ತು ನಿಗಧಿತ ಇಎಂಡಿ ಮೊತ್ತದ ಡಿ.ಡಿ.ಗಳನ್ನು "Divisional Controller, K.S.R.T.C., Mandya Division, Mandya" ಇವರ ಹೆಸರಿಗೆ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಡಿ.ಡಿ. ರೂಪದಲ್ಲಿ ಪ್ರತ್ಯೇಕವಾಗಿ ಪಡೆದು ಸ್ವ-ಹಸ್ತದಿಂದ ಬರೆದ ಅರ್ಜಿಯೊಂದಿಗೆ ಎಲ್ಲಾ ಅಗತ್ಯ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ನಿಗಧಿತ ಅವಧಿಯಲ್ಲಿ ವಿಭಾಗದ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸುವುದು. ತಪ್ಪಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಲ್ಲದೆ ಇದೇ ರೀತಿ ಮರುಕಳಿಸಿದ್ದಲ್ಲಿ ಅಂತಹ ಅರ್ಜಿದಾರರನ್ನು/ಬಿಡ್‌ದಾರರನ್ನು 2 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್/ಸಂಧಾನದಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು. ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರ್ಜಿದಾರರು ಚಾಲ್ತಿಯಲ್ಲಿರುವ ತಮ್ಮ ಮೊಬೈಲ್/ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು. ಅರ್ಜಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ. ಮೂಲ ದಾಖಲಾತಿಗಳನ್ನು ಸಂಧಾನದಲ್ಲಿ ಪರಿಶೀಲನೆಗೆ ಹಾಜರುಪಡಿಸುವುದು.
2. **ಬಿಡ್‌ದಾರರು ಜಿಎಸ್‌ಟಿ ಹೊರತುಪಡಿಸಿ ಮಾಸಿಕ ಪರವಾನಗಿ ಶುಲ್ಕವನ್ನು ಮಾತ್ರ ಬಿಡ್ ಮಾಡುವುದು. ಆಯ್ಕೆಯಾದ ಬಿಡ್‌ದಾರರು ಬಿಡ್ ಮೊತ್ತದ ಮೇಲೆ ನಿಗಧಿತ ಜಿಎಸ್‌ಟಿ ಶುಲ್ಕವನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಪಾವತಿಸುವುದು. ಪ್ರಸ್ತುತ ಶೇ.18 ಜಿಎಸ್‌ಟನ್ನು ಮಾಸಿಕ ಪರವಾನಗಿ ಶುಲ್ಕದೊಂದಿಗೆ ಪಾವತಿಸಬೇಕು ಮತ್ತು ಸರ್ಕಾರ/ಸಂಬಂಧಪಟ್ಟ ಇಲಾಖೆಗಳು ಜಿಎಸ್‌ಟಿ ಮೊತ್ತದಲ್ಲಿ ಪರಿಷ್ಕರಣೆ ಮಾಡಿದಲ್ಲಿ ಅದರನ್ವಯ ಬದಲಾದ ಮೊತ್ತದ ಜಿಎಸ್‌ಟಿ ಪಾವತಿಸಲು ಬದ್ಧರಿರಬೇಕು.**
3. **ಬಿಡ್‌ದಾರರು ಒಂದು ವೇಳೆ ಜಿಎಸ್‌ಟಿ/ತೆರಿಗೆಯನ್ನು ಸೇರಿಸಿ ಬಿಡ್ ಮಾಡಿದ್ದಲ್ಲಿ ಅಂತಹ ಬಿಡ್‌ನ್ನು ಅಂಗೀಕರಿಸಲಾಗುವುದಿಲ್ಲ.**
4. ನಿಗಧಿತ ಅರ್ಜಿ ಶುಲ್ಕದ ಡಿ.ಡಿ ಮತ್ತು ಇಎಂಡಿ ಮೊತ್ತದ ಡಿ.ಡಿ.ಯನ್ನು ಸಂಧಾನ ಕರೆಯಲಾದ ದಿನಾಂಕದಿಂದ ಸಂಧಾನ ನಡೆಸುವ ದಿನಾಂಕದೊಳಗೆ ಮಾತ್ರ ಪಡೆದು ಸಲ್ಲಿಸುವುದು. ಸಂಧಾನ ಕರೆಯಲಾದ ಹಿಂದಿನ ದಿನಾಂಕದ ಅಥವಾ ಮುಕ್ತಾಯದ ನಂತರದ ಪಡೆದ ಡಿ.ಡಿ.ಗಳನ್ನು ಅಂಗೀಕರಿಸಲಾಗುವುದಿಲ್ಲ ಮತ್ತು ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.
5. ಇ.ಎಂ.ಡಿ. ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
6. ಆಯ್ಕೆಯಾದ ಪರವಾನಗಿದಾರರು ನಿಗಧಿತ ಭದ್ರತಾ ಠೇವಣಿ ಅಥವಾ ಪರವಾನಗಿ ಶುಲ್ಕವನ್ನು RTGS / NEFT ಮೂಲಕ ಪಾವತಿ ಮಾಡುವಾಗ ಬಸ್ ನಿಲ್ದಾಣ, ಮಳಿಗೆ ಸಂಖ್ಯೆ, ಪರವಾನಗಿದಾರರ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
7. ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
8. ಆಯ್ಕೆಯಾದ ಪರವಾನಗಿದಾರರು/ಹೆಚ್1 ಬಿಡ್‌ದಾರರರು ನಿಗದಿತ ಭದ್ರತಾ ಠೇವಣಿ ಮೊತ್ತವನ್ನು ಹಾಗೂ ಒಂದು ತಿಂಗಳ ಪರವಾನಗಿ ಶುಲ್ಕ ಮತ್ತು ಜಿಎಸ್‌ಟಿ ಮೊತ್ತವನ್ನು ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ. / RTGS / NEFT ಮೂಲಕ ಪತ್ರ ಸ್ವೀಕರಿಸಿದ 15 ದಿನದೊಳಗಾಗಿ ಪಾವತಿಸುವುದು.

| ಕ್ರ.ಸಂ. | ಪರವಾನಗಿ ಅವಧಿ | ಮಳಿಗೆ ಮಾದರಿ/ಸ್ಥಳ | ಒಟ್ಟು ಪಾವತಿಸಿಕೊಳ್ಳಬೇಕಿರುವ ಭದ್ರತಾ ಠೇವಣಿ |
|---|---|---|---|
| 1 | 3 ವರ್ಷ | ತೆರೆದ ಸ್ಥಳದಲ್ಲಿನ ಮಳಿಗೆಗಳು | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 6 ಪಟ್ಟು |
| 2 | 5 ವರ್ಷ | ಕಟ್ಟಿದ ಮಳಿಗೆಗಳು | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |
| 3 | 10 ವರ್ಷ | ಡಾರ್ಮಿಟರಿ / ಲಾಡ್ಜಿಂಗ್ / ಕಛೇರಿ ಉದ್ದೇಶಕ್ಕಾಗಿ / ಮೊಬೈಲ್ ಟವರ್ಸ್ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 10 ಪಟ್ಟು |

9. ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
10. ಆಯ್ಕೆಗೊಂಡ ಪರವಾನಗಿದಾರರ ಇ.ಎಂ.ಡಿ. ಮೊತ್ತವನ್ನು ಭದ್ರತಾ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು, ಪಾವತಿಸಬೇಕಾದ ಉಳಿಕೆ ಭದ್ರತಾ ಠೇವಣಿಯ ಮೊತ್ತವನ್ನು ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ./RTGS/NEFT ಮೂಲಕ ಪಾವತಿಸುವುದು.ವಿಭಾಗೀಯ ಕಛೇರಿಯ RTGS ವಿವರ ಈ ಕೆಳಕಂಡಂತಿದೆ. ಬ್ಯಾಂಕ್ ಹೆಸರು: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಶಾಖೆ: ವಿ.ವಿ.ರೋಡ್, ಮಂಡ್ಯ, ಖಾತೆದಾರರ ಹೆಸರು:D.C, K.S.R.T.C, Mandya Division, Mandya, ಖಾತೆ ಹೆಸರು:ಕರೆಂಟ್ ಅಕೌಂಟ್, ಅಂಕೌಂಟ್ ಸಂಖ್ಯೆ-64005771029 ಮತ್ತು ಐಎಫ್‌ಎಸಿ ಕೋಡ್ ಸಂಖ್ಯೆ- SBIN0040035 ಹಾಗೂ ವಿಭಾಗದ ಜಿಎಸ್‌ಟಿ ಸಂಖ್ಯೆ- 29AAACV6497R2Z4. ಹೆಚ್ಚಿನ ವಿವರಗಳಿಗಾಗಿ ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ದೂರವಾಣಿ ಸಂ.7760990655ನ್ನು ಸಂಪರ್ಕಿಸಬಹುದಾಗಿದೆ.
11. ಸಂಧಾನ ಅರ್ಜಿಯೊಂದಿಗೆ ಮಳಿಗೆಗಳ ಸಂಪೂರ್ಣ ವಿವರ, ಬಿಡ್‌ದಾರರು ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು, ಅರ್ಹತಾ ಮಾನದಂಡಗಳು, ಮಳಿಗೆಯ ನಕ್ಷೆ ಹಾಗೂ ಸಂಬಂಧಿಸಿದ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ಪ್ರತಿಯಲ್ಲಿ, ಬಿಡ್‌ದಾರರು ಸಹಿ ಮಾಡಿ ಸಲ್ಲಿಸುವುದು.
12. ಬಿಡ್‌ದಾರರು ಮಳಿಗೆಗಳಿಗೆ ತಮ್ಮ ಬಿಡ್‌ನ್ನು ಸಲ್ಲಿಸುವ ಮೊದಲು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತವನ್ನು ದಾಖಲಿಸುವುದು, ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಸಂಧಾನ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಮಳಿಗೆಯ ವ್ಯವಹಾರ/ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
13. ಆಯ್ಕೆಗೊಂಡ ಪರವಾನಗಿದಾರರು ಮಳಿಗೆಯನ್ನು ಸ್ವತ: ನಡೆಸುವುದು, ಪರಭಾರೆ ಮಾಡುವಂತಿಲ್ಲ.
14. ಬಿಡ್‌ದಾರರ ಷರತ್ತಿನ ಸಂಧಾನಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಸಂಧಾನದ ನಿಯಮಗಳನ್ನು ಪಾಲಿಸಿರುವ ಅರ್ಹ ಬಿಡ್‌ದಾರರನ್ನು ಮಾತ್ರ ಅಂಗೀಕರಿಸಲಾಗುವುದು.
15. ಸಂಧಾನದಲ್ಲಿ ಭಾಗವಹಿಸುವ ಬಿಡ್‌ದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಸಂಧಾನದಲ್ಲಿ ಅರ್ಜಿಯೊಂದಿಗೆ ಸಲ್ಲಿಸುವುದು.

| ರೂ.5.00 ಲಕ್ಷಗಳಿಗಿಂತ ಕಡಿಮೆ ಮಾಸಿಕ ಪರವಾನಗಿ ಶುಲ್ಕವಿರುವ ವಾಣಿಜ್ಯ ಮಳಿಗೆಗಳಿಗೆ ಸಲ್ಲಿಸಬೇಕಾದ ದಾಖಲೆಗಳು |
|---|
| ಅ) ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc.).<br>ಆ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಇ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಈ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ-ದೃಢೀಕರಣ ಪತ್ರ ಸಲ್ಲಿಸುವುದು.(ಅನುಭಂದ-ಅ)(Annexure-A)ನ್ನು ಭರ್ತಿಗೊಳಿಸಿ ಸಲ್ಲಿಸುವುದು.)<br>ಉ) ಪಾನ್ ಕಾರ್ಡ್<br>ಊ) ಷರತ್ತು ನಿಬಂಧನೆಗಳನ್ನು ಓದಿ ಒಪ್ಪಿ ಸಹಿ ಮಾಡಿದ ಪ್ರತಿಯನ್ನು ಸಲ್ಲಿಸುವುದು.<br>ಋ) ಅರ್ಜಿ ಶುಲ್ಕದ ಡಿ.ಡಿ.<br>ಎ) ಇ.ಎಂ.ಡಿ ಮೊತ್ತದ ಡಿ.ಡಿ |

| ರೂ.5.00 ಲಕ್ಷ ಅಥವಾ ಹೆಚ್ಚಿನ ಮಾಸಿಕ ಪರವಾನಗಿ ಶುಲ್ಕವಿರುವ ವಾಣಿಜ್ಯ ಮಳಿಗೆಗಳಿಗೆ ಸಲ್ಲಿಸಬೇಕಾದ ದಾಖಲೆಗಳು |
|---|
| ಅ) ಕಂಪನಿ / ವ್ಯಕ್ತಿಯ ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc.)<br>ಆ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಇ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಈ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ-ದೃಢೀಕರಣ ಪತ್ರ ಸಲ್ಲಿಸುವುದು.(ಅನುಭಂದ-1 (Annexure-1)ನ್ನು ಭರ್ತಿಗೊಳಿಸಿ.)<br>ಉ) ಪಾನ್ ಕಾರ್ಡ್<br>ಊ) ಷರತ್ತು ಮತ್ತು ನಿಬಂಧನೆಗಳನ್ನು ಓದಿ ಸಹಿ ಮಾಡಿದ ಪ್ರತಿಗಳು.<br>ಋ) ಅರ್ಜಿ ಶುಲ್ಕದ ಡಿ.ಡಿ.<br>ಎ) ಇ.ಎಂ.ಡಿ ಮೊತ್ತದ ಡಿ.ಡಿ.<br>ಏ) ಆದಾಯ ತೆರಿಗೆ ತೀರುವಳಿ ಪತ್ರ.<br>ಐ) ನಿಗಧಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ವಹಿವಾಟು ನಡೆಸಿರುವ ಬಗ್ಗೆ, 02 ವರ್ಷದ ವಾರ್ಷಿಕ ವಹಿವಾಟಿನ ದಾಖಲೆಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು. (2021-2022 ಹಾಗೂ 2022-2023)<br>ಒ) ವಹಿವಾಟಿಗೆ ಪೂರಕವಾಗಿ ಕಳೆದ 02 ವರ್ಷದ ಲಾಭ / ನಷ್ಟದ ಲೆಕ್ಕಾಚಾರದ ದಾಖಲೆಗಳು ಮತ್ತು ಬ್ಯಾಲೆನ್ಸ್ ಶೀಟ್ ಪ್ರತಿಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು. (2021-2022 ಹಾಗೂ 2022-2023)<br>ಓ) ಜಿಎಸ್‌ಟಿ ಸರ್ಟಿಫಿಕೇಟ್ |

16. ಸಂಧಾನದಲ್ಲಿ ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು H1 ಮತ್ತು H2 ಬಿಡ್‌ದಾರರು ನಮೂದಿಸಿದ ಸಂದರ್ಭದಲ್ಲಿ, H1 ಬಿಡ್‌ದಾರರು ಭದ್ರತಾ ಠೇವಣಿ/ಮುಂಗಡಪರವಾನಗಿ ಶುಲ್ಕ ಪಾವತಿಸದಿದ್ದಲ್ಲಿ/ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ನಂತರ H2 ಬಿಡ್‌ದಾರರನ್ನು(ನಿಗಮದ ಷರತ್ತಿಗೊಳ್ಳಪಟ್ಟು) ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ. ಒಂದು ವೇಳೆ H2 ಬಿಡ್‌ದಾರರು ಆಯ್ಕೆಯಾಗಿ ಭದ್ರತಾ ಠೇವಣಿ/ಮುಂಗಡಪರವಾನಗಿ ಶುಲ್ಕ ಪಾವತಿಸದಿದ್ದಲ್ಲಿ/ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ನಂತರ ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ಮೊತ್ತ ಬಿಡ್ ಮಾಡಿದ H3 ಬಿಡ್‌ದಾರರನ್ನು(ನಿಗಮದ ಷರತ್ತಿಗೊಳ್ಳಪಟ್ಟು) ಸಹ ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ. ಒಂದು ವೇಳೆ H3 ಬಿಡ್‌ದಾರರು ಆಯ್ಕೆಯಾಗಿ ಭದ್ರತಾ ಠೇವಣಿ/ಮುಂಗಡಪರವಾನಗಿ ಶುಲ್ಕ ಪಾವತಿಸದಿದ್ದಲ್ಲಿ/ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
17. ತೆರೆದ ಸ್ಥಳಕ್ಕೆ ಮೂರು(03) ವರ್ಷ ಮತ್ತು ಸ್ಥಿರ ಮಳಿಗೆಗಳಿಗೆ ಐದು(05) ವರ್ಷ ಅವಧಿಗೆ ಆಯ್ಕೆಯಾದ ಅರ್ಜಿದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗುವುದು.

18. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ಸ್ವೀಕರಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು. ವಾಣಿಜ್ಯ ಮಳಿಗೆಗಳಿಗೆ ಆಯ್ಕೆಯಾದ ಪರವಾನಗಿದಾರರು ಕರ್ನಾಟಕ ಸ್ಟಾಂಪ್ ಆಕ್ಟ್-2010 ರನ್ವಯ ಒಂದು ವರ್ಷ ಮೀರುವ ಮತ್ತು 10 ವರ್ಷ ಮೀರದೆ ಇರುವ ಪರವಾನಗಿ ಅವಧಿಗೆ, ಒಟ್ಟು ಪರವಾನಗಿ ಶುಲ್ಕದ (ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳ ಸೇರಿದಂತೆ) ಸರಾಸರಿ ಮೊತ್ತದ ಮೇಲೆ ಶೇ.1 ರಷ್ಟು ಹಾಗೂ ಭದ್ರತಾ ಠೇವಣಿ ಮೊತ್ತದ ಮೇಲೆ ಶೇ.1 ರಷ್ಟು ಸ್ಟಾಂಪ್ ಶುಲ್ಕವನ್ನು ಭರಿಸಬೇಕಾಗುತ್ತದೆ.
19. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ಸ್ವೀಕರಿಸಿದ 15 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
20. ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು, ಪ್ರಸ್ತುತ ಶೇ.18, ದ್ವಿ-ಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿ ಶುಲ್ಕದ ಮೇಲೆ ಶೇ.2ರಷ್ಟು ಟಿಸಿಎಸ್ ಪಾವತಿಸಬೇಕಿರುತ್ತದೆ. ಸದರಿ ಶುಲ್ಕಗಳನ್ನು ಮುಂಗಡವಾಗಿ ನಿಗಮಕ್ಕೆ ಪಾವತಿಸಬೇಕು. ಕಾಲ ಕಾಲಕ್ಕೆ ಸರ್ಕಾರ ವಿಧಿಸುವ ತೆರಿಗೆಯಲ್ಲಿನ ಬದಲಾವಣೆಗೆ ಬದ್ಧರಿರುವುದು. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18 ರಷ್ಟು ಬಡ್ಡಿಯನ್ನು ಕನಿಷ್ಠ ರೂ.100/- ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸಲಾಗುವುದು.
21. ಪರವಾನಗಿದಾರರು ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
22. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್/ನಿಬಂಧನೆಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.
23. ಪರವಾನಗಿದಾರರಿಂದ GST ನೊಂದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ಸಲ್ಲಿಸುವುದು.
24. ಮಾಸಿಕ ಪರವಾನಗಿಶುಲ್ಕವು ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳ ಮಾಡಲಾಗುತ್ತದೆ. ಇದಕ್ಕನುಗುಣವಾಗಿ ಸರಕು & ಸೇವಾ ತೆರಿಗೆಯು ಹೆಚ್ಚಳವಾಗುತ್ತದೆ.
25. ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳನ್ನು ನಿಗದಿತ ಸಮಯದಲ್ಲಿ ಪಾವತಿಸಬೇಕು.
26. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸಂಬಂಧಿಸಿದ ವಿಭಾಗ / ಘಟಕದ ಲೆಕ್ಕ ಪತ್ರ ಶಾಖೆಯಲ್ಲಿ, DD (ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕುಗಳ) / RTGS / NEFT ಮೂಲಕ ಪಾವತಿಸುವುದು.ಸಂಬಂಧಪಟ್ಟ ವಿಭಾಗೀಯ ಕಛೇರಿ / ಸಂಬಂಧಪಟ್ಟ ಘಟಕದ ಅಕೌಂಟ್ ಸಂಖ್ಯೆ / ಐಎಫ್‌ಎಸ್‌ಸಿ ಕೋಡ್ ಅನ್ನು ಪರವಾನಗಿದಾರರಿಗೆ ಪಡೆದುಕೊಂಡು, ಪರವಾನಗಿದಾರರು RTGS / NEFT ಮೂಲಕ ಪಾವತಿ ಮಾಡುವಾಗ ಬಸ್ ನಿಲ್ದಾಣ, ಮಳಿಗೆ ಸಂಖ್ಯೆ, ಪರವಾನಗಿದಾರರ ಹೆಸರು ಮತ್ತು ಮಾಹೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ನಗದು ಕೌಂಟರ್‌ನಲ್ಲಿ, ಭಾರತೀಯ ರಿಜರ್ವ್ ಬ್ಯಾಂಕ್ ನಿಗದಿಪಡಿಸಿದ ಮಿತಿಯಲ್ಲಿ ನಗದು ರೂಪದಲ್ಲಿ ಪಾವತಿಸುವುದು.
27. ನಿಗಮದ ಕೊಳವೆ ಬಾವಿಗಳಿಂದ ನೀರಿನ ಸೌಲಭ್ಯವನ್ನು ಕಲ್ಪಿಸಿರುವಂತಹ ಮಳಿಗೆಗಳ ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕದ ಶೇ.2 ರಷ್ಟು ಅಥವಾ ಕೊಳವೆ ಬಾವಿಯ ವಿದ್ಯುತ್ ಬಿಲ್ಲಿನ ಶೇ.50 ರಷ್ಟು, ಇದರಲ್ಲಿ ಯಾವುದು ಹೆಚ್ಚಿನದು, ಆ ಮೊತ್ತವನ್ನು ಪಾವತಿಸಬೇಕು.
28. ಒಂದು ವೇಳೆ ಮಳಿಗೆಗಳಿಗೆ ಜಲಮಂಡಳಿ / ಸಂಬಂಧಿಸಿದ ಇಲಾಖೆಗಳಿಂದ ಪ್ರತ್ಯೇಕವಾಗಿ ನೀರಿನ ಸಂಪರ್ಕ ಅಳವಡಿಸಿದ್ದಲ್ಲಿ, ಅಂತಹ ಮಳಿಗೆಯ ಪರವಾನಗಿದಾರರು ಅನ್ವಯಿಸುವ ನೀರಿನ ಶುಲ್ಕವನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಬೇಕು.
29. ಒಂದು ವೇಳೆ ನಿಗಮದ ವತಿಯಿಂದ ನೀರಿನ ಸರಬರಾಜು ಮಾಡಲು ಸಾಧ್ಯವಾಗದಿದ್ದಲ್ಲಿ, ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿರುತ್ತದೆ.
30. ಪರವಾನಗಿದಾರರು ಕೊಳವೆ ಬಾವಿ (Borewell) ಕೊರೆಸಲು ಅನುಮತಿ ಕೋರಿದಲ್ಲಿ, ಸ್ಥಳೀಯ ಸಂಸ್ಥೆಗಳ ನಿಯಮಾವಳಿಗಳು, ವಾಣಿಜ್ಯ ಸ್ಥಳ, ಬಸ್ ನಿಲ್ದಾಣದಲ್ಲಿ ಹಾಲಿ ಇರುವಂತಹ ಬೋರ್‌ವೆಲ್‌ಗಳ ಆಧಾರದಲ್ಲಿ ನಿರ್ಧರಿಸಲಾಗುವುದು. ನಿಗಮದ ತೀರ್ಮಾನಕ್ಕೆ ಪರವಾನಗಿದಾರರು ಬದ್ಧರಾಗಿರಬೇಕು.
31. ಪರವಾನಗಿದಾರರು ಸಂಧಾನ / ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಆ ವಾಣಿಜ್ಯ ಮಳಿಗೆಗೆ ಹೊಂದಿಕೊಂಡಂತೆ ಸ್ಥಳಾವಕಾಶ ಲಭ್ಯತೆಗೆ ಅನುಗುಣವಾಗಿ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ನೀಡಿದಲ್ಲಿ, ಸಂಧಾನ / ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.20 ರಷ್ಟು ವಿಸ್ತೀರ್ಣದ ಸ್ಥಳವನ್ನು, ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚ.ಅಡಿ ಪರವಾನಗಿ ಶುಲ್ಕದ 1.5 ಪಟ್ಟು ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಿ ಒದಗಿಸುವುದು. ಹೆಚ್ಚುವರಿ ಸ್ಥಳಾವಕಾಶ ಬಳಸಿಕೊಂಡು ಪ್ರತ್ಯೇಕ ಮಳಿಗೆ, ಕೌಂಟರ್, ವ್ಯವಹಾರ ಮಾಡಲು ಅವಕಾಶವಿರುವುದಿಲ್ಲ.
32. ಸಣ್ಣ ವಿಸ್ತೀರ್ಣದ ಮಳಿಗೆಗಳಿಗೆ, ಅಂದರೆ 200 ಚದರಡಿ ವಿಸ್ತೀರ್ಣದ ಒಳಗಿನ ಮಳಿಗೆಗಳನ್ನೂ ಒಳಗೊಂಡಂತೆ ಸ್ಥಳಾವಕಾಶ ಲಭ್ಯತೆಗೆ ಅನುಗುಣವಾಗಿ ಟೆಂಡರ್/ಸಂಧಾನ/ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.20ರಷ್ಟು ಹೆಚ್ಚುವರಿ ಸ್ಥಳಾವಕಾಶವನ್ನು ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚದರಡಿ ಪರವಾನಗಿ ಶುಲ್ಕದ 1.5ಪಟ್ಟು(ಪ್ರೋರೇಟಾ) ಮೊತ್ತವನ್ನು ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಿ ಒದಗಿಸಲಾಗುವುದು. ಹೆಚ್ಚುವರಿ ಸ್ಥಳಾವಕಾಶವನ್ನು ಬಳಸಿಕೊಂಡು ಪ್ರತ್ಯೇಕ ಮಳಿಗೆ/ವ್ಯವಹಾರ ಮಾಡಲು ಅವಕಾಶ ಇರುವುದಿಲ್ಲ.
33. ಪಾರ್ಕಿಂಗ್ ಸ್ಥಳ, ಮೊದಲನೇ ಮಹಡಿ, ಉಪಹಾರ ಗೃಹಕ್ಕೆ ಹೊಂದಿಕೊಂಡಂತೆ ಹೆಚ್ಚುವರಿ ಅನುಪಯುಕ್ತ ಸ್ಥಳಾವಕಾಶ ಲಭ್ಯವಿದ್ದಲ್ಲಿ ಮಾತ್ರ ಸಂಧಾನ/ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.50ಕ್ಕೂ ಹೆಚ್ಚಿನ ಸ್ಥಳ ಲಭ್ಯವಿದ್ದಲ್ಲಿ ಮಾತ್ರ, ಸದರಿ ಮಳಿಗೆಗಳಿಗೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಎರಡನೇ ಪಾರ್ಟಿಯು ಮನವಿ ನೀಡಿದಲ್ಲಿ, ಸದರಿ ಹೆಚ್ಚುವರಿ ಸ್ಥಳಾವಕಾಶದಿಂದ, ಸಾರ್ವಜನಿಕ ಪ್ರಯಾಣಿಕರಿಗೆ ಹಾಗೂ ವಾಹನಗಳ ಸಂಚಾರಕ್ಕೆ ಯಾವುದೇ ಅಡಚಣೆ ಉಂಟಾಗದಂತೆ ಇದ್ದಲ್ಲಿ, ಕೇಂದ್ರ ಕಛೇರಿಯ ಅನುಮೋದನೆ ಪಡೆದು, ತದನಂತರ ಹೆಚ್ಚುವರಿ ಸ್ಥಳಾವಕಾಶವನ್ನು ಒದಗಿಸಲಾಗುವುದು. ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.50ಕ್ಕೂ ಹೆಚ್ಚಿನ ಸ್ಥಳ ಲಭ್ಯವಿದ್ದಲ್ಲಿ ಮಾತ್ರ, ಹಾಲಿ

ಪಾವತಿಸುತ್ತಿರುವ ಪರವಾನಗಿ ಶುಲ್ಕ ಪಾವತಿಯ ಆಧಾರದ ಮೇಲೆ (1ಪಟ್ಟು ಪ್ರೋರೇಟಾ) ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಿ ಒದಗಿಸಲಾಗುವುದು. ಹೆಚ್ಚುವರಿ ಸ್ಥಳಾವಕಾಶ ಬಳಸಿಕೊಂಡು ಪ್ರತ್ಯೇಕ ಮಳಿಗೆ, ಕೌಂಟರ್, ವ್ಯವಹಾರ ಮಾಡಲು ಅವಕಾಶವಿರುವುದಿಲ್ಲ ಹಾಗೂ ಕರಾರು ಒಪ್ಪಂದದಲ್ಲಿನ ನಿಗದಿತ ವ್ಯವಹಾರವನ್ನು ಹೊರತುಪಡಿಸಿ ಬೇರೆ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

34. ಮದ್ದೂರು ಮಿಡ್ ವೇ ಪ್ಲಾಜಾದಲ್ಲಿ ಪ್ರಸ್ತುತ ಇರುವ 05 ಶಾಶ್ವತ ವಾಣಿಜ್ಯ ಮಳಿಗೆಗಳನ್ನು ಹೊರತುಪಡಿಸಿ ಬೇರೆ ವಾಣಿಜ್ಯ ಮಳಿಗೆಗಳನ್ನು ಕಟ್ಟುವುದಾಗಲಿ/ಸ್ಟ್ರಕ್ಚರ್ ತೆರೆಯುವುದಾಗಲಿ/ಪ್ರತ್ಯೇಕ ಮಳಿಗೆಗಳನ್ನು ನಿರ್ಮಿಸುವುದಾಗಲಿ ಮಾಡುವಂತಿಲ್ಲ.
35. ಮದ್ದೂರು ಮಿಡ್ ವೇ ಪ್ಲಾಜಾವನ್ನು "As is where is basis" ಆಧಾರದಲ್ಲಿ ಏಕೈಕ ಪರವಾನಗಿದಾರರ ಆಯ್ಕೆಮಾಡಲು ಸಂಧಾನ ಕರೆಯಲಾಗಿದೆ.
36. ಮದ್ದೂರು ಮಿಡ್ ವೇ ಪ್ಲಾಜಾದ/ಹೋಟೆಲ್‌ನ ದುರಸ್ಥಿ ಕಾರ್ಯವನ್ನು ಆಯ್ಕೆಯಾದ ಪರವಾನಗಿದಾರರೇ ತಮ್ಮ ಸ್ವತಂ ಖರ್ಚಿನಲ್ಲಿ ನಿರ್ವಹಿಸಿಕೊಳ್ಳುವುದು ಸದರಿ ದುರಸ್ಥಿ ಕೆಲಸ ನಿರ್ವಹಿಸಿಕೊಳ್ಳಲು 01 ತಿಂಗಳಿಗೆ ಮಾತ್ರ ಪರವಾನಗಿ ಶುಲ್ಕ ರಹಿತವಾಗಿ ಅವಕಾಶ ನೀಡಲಾಗುವುದು. ಆ ಅವಧಿಯಲ್ಲಿ ಮಿಡ್ ವೇ ಪ್ಲಾಜಾದಲ್ಲಿ ವ್ಯವಹಾರ ಮಾಡುವಂತಿಲ್ಲ ಸಂಪೂರ್ಣ ಮುಚ್ಚಿರಬೇಕು. ಒಂದು ಪಕ್ಷ ವ್ಯವಹಾರ ನಡೆಸಿದ್ದಲ್ಲಿ ಆ ಅವಧಿಗೆ ಪರವಾನಗಿ ಶುಲ್ಕ ಮನ್ನಾ ಮಾಡಲಾಗುವುದಿಲ್ಲ. ಪರವಾನಗಿ ಶುಲ್ಕವನ್ನು ಪಾವತಿಸಬೇಕಿರುತ್ತದೆ. ಸದರಿ ಅವಧಿಯನ್ನು ಒಟ್ಟಾರೆ ಕರಾರಿನ ಅವಧಿಗೆ ಸೇರಿಸಿಕೊಳ್ಳಲಾಗುವುದು.
37. ಆಯ್ಕೆಯಾದ ಪರವಾನಗಿದಾರರು ಮದ್ದೂರು ಮಿಡ್ ವೇ ಪ್ಲಾಜಾದ ದುರಸ್ಥಿ ಕಾರ್ಯವನ್ನು ಕೈಗೊಳ್ಳುವ ಮೊದಲು ನಿಗಮಕ್ಕೆ ಮನವಿ ಸಲ್ಲಿಸುವುದು.
38. ಮದ್ದೂರು ಮಿಡ್ ವೇ ಪ್ಲಾಜಾದ ಆವರಣ/ಶೌಚಾಲಯ/ಮೂತ್ರಾಲಯಗಳ ಸ್ವಚ್ಛತಾ ನಿರ್ವಹಣೆಯನ್ನು ತಾವೇ ತಮ್ಮ ಸ್ವಂತ ಖರ್ಚಿನಲ್ಲಿ ಉತ್ತಮ ರೀತಿಯಲ್ಲಿ ಅಗತ್ಯ ಯಂತ್ರೋಪಕರಣಗಳನ್ನು ಬಳಸಿ ನಿರ್ವಹಿಸುವುದು.
39. ಮಿಡ್ ವೇ ಪ್ಲಾಜಾದ ಕರಾರು ಒಪ್ಪಂದದ ಅವಧಿ ಮುಕ್ತಾಯವಾದ ತಕ್ಷಣ/ಕರಾರು ರದ್ದುಪಡಿಸಿಕೊಂಡಲ್ಲಿ ಸದರಿ ಪ್ಲಾಜಾ/ಕಟ್ಟಡ/ಸ್ಟ್ರಕ್ಚರ್/ಇತರೆ ಆಸ್ತಿಯನ್ನು ನಿಗಮದ ವಶಕ್ಕೆ ಸುಸ್ಥಿತಿಯಲ್ಲೇ ನೀಡುವುದು. ಕರಾರು ಮಾಡಿಕೊಳ್ಳುವ ಸಮಯದಲ್ಲಿ ಸದರಿ ಪ್ಲಾಜಾಗೆ ನಿಗಮದಿಂದ ಸುಸ್ಥಿತಿಯಲ್ಲಿ ಒದಗಿಸಿರುವ ವೈರಿಂಗ್, ಸ್ಯಾನಿಟರಿ ಫಿಟಿಂಗ್ಸ್, ನೀರಿನ ಪೈಪ್ಸ್ ಇತರೆ ಸ್ಥಿರಾಸ್ಥಿ ಹಾಗೂ ಚರಾಸ್ತಿಗಳನ್ನು ನಿಗಮದ ವಶಕ್ಕೆ ಸುಸ್ಥಿತಿಯಲ್ಲೇ ನೀಡುವುದು. ಆಯ್ಕೆಯಾದ ಪರವಾನಗಿದಾರರು ಪೀಠೋಪಕರಣ, ಪಾತ್ರೆಗಳು ಮತ್ತು ಇತರೆ ಅಡುಗೆ ಮನೆ ಸಾಮಾಗ್ರಿಗಳನ್ನು ಹಿಂತೆಗೆದುಕೊಳ್ಳಬಹುದಾಗಿದೆ.
40. ಮಿಡ್ ವೇ ಪ್ಲಾಜಾದ ಕರಾರು ಒಪ್ಪಂದದ ಅವಧಿ ಮುಕ್ತಾಯವಾದ ತಕ್ಷಣ/ಕರಾರು ರದ್ದುಪಡಿಸಿಕೊಂಡಲ್ಲಿ ಸದರಿ ಪ್ಲಾಜಾ/ಕಟ್ಟಡ/ಸ್ಟ್ರಕ್ಚರ್/ಇತರೆ ನಿಗಮದ ಆಸ್ತಿಯು ತನಗೆತಾನಾಗಿಯೇ ನಿಗಮದ ವಶಕ್ಕೆ ಬರುತ್ತದೆ.
41. ಆಯ್ಕೆಯಾದ ಪರವಾನಗಿದಾರರು ಕಾನೂನು ರೀತ್ಯಾ ಎಲ್ಲಾ ಶಾಸನಿಕ ಪಾವತಿಗಳನ್ನು ಮತ್ತು ಎಲ್ಲಾ ರೀತಿ ತೆರಿಗೆಗಳನ್ನು ಕಾನೂನು ರೀತಿ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಪಾವತಿಸುವುದು.
42. ಆಯ್ಕೆಯಾದ ಪರವಾನಗಿದಾರರು ಅವಶ್ಯವಿರುವ ಎಲ್ಲಾ ಪರವಾನಗಿ ಪತ್ರಗಳನ್ನು ಮತ್ತು ಕ್ಲಿಯರೆನ್ಸ್‌ನ್ನು ಸಂಬಂಧಪಟ್ಟ ಪುರಸಭೆ/ನಗರಸಭೆ, ಚೆಸ್ಕಾಂ, ಆರೋಗ್ಯ, ಕಾರ್ಮಿಕ, ವಾಯುಮಾಲಿನ್ಯ ನಿಯಂತ್ರಣ ಇಲಾಖೆ ಇತ್ಯಾದಿ ಪ್ರಾಧಿಕಾರಗಳಿಂದ/ಇಲಾಖೆ/ಸಂಸ್ಥೆಗಳಿಂದ ಪಡೆದುಕೊಳ್ಳುವುದು. ಒಂದು ಪಕ್ಷ ಸದರಿ ಪರವಾನಗಿ ಪತ್ರಗಳನ್ನು ಮತ್ತು ಕ್ಲಿಯರೆನ್ಸ್‌ಗಳನ್ನು ಪಡೆದುಕೊಳ್ಳಲು ವಿಫಲರಾಗಿದ್ದಲ್ಲಿ ಅಥವಾ ಶಾಸನಬದ್ಧ ನಿಬಂಧನೆಗಳನ್ನು ಪಾಲಿಸದ ಕಾರಣದಿಂದ ಉಂಟಾಗುವ ಯಾವುದೇ ಪರಿಣಾಮಗಳಿಗೆ ಆಯ್ಕೆಯಾದ ಪರವಾನಗಿದಾರರೇ ನೇರ ಜವಾಬ್ದಾರರಾಗಿರುತ್ತಾರೆ.
43. ನಿಗಮವು ಒಂದು ಪಕ್ಷ ಪ್ರೀಮಿಯಂ ಸೇವೆಗಳ ನಿಲುಗಡೆ ಕಲ್ಪಿಸಿದ್ದಲ್ಲಿ ಪ್ರಯಾಣಿಕರು ಕಾಯದಂತೆ/ ಪ್ರಯಾಣಿಕರಿಗೆ ತಡವಾಗದಂತೆ ಪ್ರತ್ಯೇಕವಾಗಿ ಡೈನಿಂಗ್ ಹಾಲ್‌ನ ವ್ಯವಸ್ಥೆಯನ್ನು ಕಲ್ಪಿಸುವುದು.
44. ಮದ್ದೂರು ಮಿಡ್ ವೇ ಪ್ಲಾಜಾದ ಬಳಿ ಊಟೋಪಚಾರಕ್ಕೆ ನಿಲುಗಡೆ ಮಾಡುವ ನಿಗಮದ ವಾಹನಗಳಿಗೆ ಅಥವಾ ಕರ್ನಾಟಕ ಅಧೀನದಲ್ಲಿರುವ ಬೇರೆ ರಾಜ್ಯದ ಸಾರಿಗೆ ವಾಹನಗಳ ನಿಲುಗಡೆಗೆ ಯಾವುದೇ ನಿಲುಗಡೆಯ ಶುಲ್ಕವನ್ನು ವಿಧಿಸುವಂತಿಲ್ಲ ಹಾಗೂ ಪರವಾನಗಿದಾರರು ನಿಲುಗಡೆ ಮಾಡುವ ಬಸ್/ವಾಹನಗಳ ಭದ್ರತಾ ವ್ಯವಸ್ಥೆ ಮಾಡಿಕೊಳ್ಳುವುದು.
45. ಮದ್ದೂರು ಮಿಡ್ ವೇ ಪ್ಲಾಜಾದ ಅನಿಮಿಯತ ವಿದ್ಯುತ್ ಪೂರೈಕೆಗಾಗಿ ಆಯ್ಕೆಯಾದ ಪರವಾನಗಿದಾರರು ಸದರಿ ಪ್ಲಾಜಾಕ್ಕೆ ಪೂರೈಕೆಯಾಗುವಷ್ಟು ಆಲು ಋಋನ್ನು ತಮ್ಮ ಸ್ವಂತ ಖರ್ಚಿನಲ್ಲಿ ಅಳವಡಿಸಿಕೊಳ್ಳುವುದು ಮತ್ತು ಕರಾರು ಒಪ್ಪಂದ ಮುಕ್ತಾಯಗೊಂಡ ನಂತರ ತೆರವುಗೊಳಿಸಿಕೊಳ್ಳುವುದು.
46. ಮದ್ದೂರು ಮಿಡ್ ವೇ ಪ್ಲಾಜಾಕ್ಕೆ ಊಟೋಪಚಾರಕ್ಕೆ ಖಾಸಗಿ/ವೈಯಕ್ತಿಕ ವಾಹನಗಳನ್ನು ಹೊರತುಪಡಿಸಿ ಖಾಸಗಿ ಪ್ರಯಾಣಿಕರ ಸಾರಿಗೆ ವಾಹನಗಳ/ಮ್ಯಾಕ್ಸಿಕ್ಯಾಬ್‌ಗಳ ಪ್ರವೇಶವನ್ನು ನಿರ್ಬಂಧಿಸಿದೆ.
47. ಆಯ್ಕೆಯಾದ ಪರವಾನಗಿದಾರರು ಮಿಡ್ ವೇ ಪ್ಲಾಜಾವನ್ನು ಉತ್ತಮ ರೀತಿ/ಸುಸ್ಥಿತಿಯಲ್ಲಿ ನಿರ್ವಹಣೆ ಮಾಡುವುದು ಹಾಗೂ ಪ್ರಯಾಣಿಕರಿಗೆ ಅಗತ್ಯ ಮೂಲ ಭೂತ ಸೌಲಭ್ಯಗಳನ್ನು ಒದಗಿಸುವುದು.
48. ಆಯ್ಕೆಯಾದ ಪರವಾನಗಿದಾರರು ಶೌಚಾಲಯದಲ್ಲಿ/ಮೂತ್ರಾಲಯ/ಆವರಣದ ಸ್ವಚ್ಚತೆಯ ನಿರ್ವಹಣೆಗೆ ಆಗ್ಯವಿರುವ ಕಾರ್ಮಿಕರನ್ನು ನಿಯೋಜಿಸಿಕೊಳುವುದು ಹಾಗೂ ಸದರಿ ಕಾರ್ಮಿಕರಿಗೆ ಸಫಾಯಿ ಕರ್ಮಚಾರಿ ಕನಿಷ್ಠ ವೇತನ ಕಾಯ್ದೆಯನ್ವಯ ಹಾಗೂ ಕಾರ್ಮಿಕ ಕನಿಷ್ಟ ವೇತನ ಕಾಯ್ದೆಗಳನ್ವಯ, ಪಿಎಫ್ ಕಾಯ್ದೆ, ಇಎಸ್‌ಐ ಕಾಯ್ದೆ ಹಾಗೂ ಇತರೆ ಸರ್ಕಾರ/ಸಂಬಂಧಪಟ್ಟ ಇಲಾಖೆಯವರು ಕಾಲ ಕಾಲಕ್ಕೆ ಹೊರಡಿಸುವ ಕಾಯ್ದೆ/ಆದೇಶಗಳನ್ವಯ ಕಾರ್ಮಿಕರಿಗೆ ಕನಿಷ್ಟ ವೇತನ, ಪಿಎಫ್, ಇಎಸ್‌ಐ ಹಾಗೂ ಇತರೆ ಶಾಸನಿಕ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಅಗತ್ಯ ಸುರಕ್ಷತಾ ಪರಿಕರಗಳನ್ನು ಒದಗಿಸುವುದು ಮತ್ತು ಸದರಿ ಪಾವತಿಗಳ ಸಂಬಂಧ ರಿಜಿಸ್ಟರ್/ದಾಖಲೆಗಳನ್ನು ನಿರ್ವಹಿಸುವುದು. ಸದರಿ ಕನಿಷ್ಟ ವೇತನ ಪಾವತಿಸಿರುವ ಮತ್ತು ಪಿಎಫ್, ಇಎಸ್‌ಐ ಪಾವತಿಸಿರುವ ಸಂಬಂಧ ದಾಖಲೆಗಳನ್ನು ಪ್ರತಿ ಮಾಹೆ ನಿಗಮಕ್ಕೆ ಸಲ್ಲಿಸುವುದು.
49. ಆಯ್ಕೆಯಾದ ಪರವಾನಗಿದಾರರು ಮದ್ದೂರು ಮಿಡ್ ವೇ ಪ್ಲಾಜಾದಲ್ಲಿ ಕರ್ತವ್ಯ ನಿರ್ವಹಿಸುವ ಕಾರ್ಮಿಕರಿಗೆ ಪಾವತಿಸುವ ಕನಿಷ್ಟ ವೇತನ, ಪಿಎಫ್, ಇಎಸ್‌ಐ ಹಾಗೂ ಇತರೆ ಶಾಸನಿಕ ಸೌಲಭ್ಯಗಳನ್ನು ಒದಗಿಸಿರುವ ಹಾಗೂ ಅಗತ್ಯ ಸುರಕ್ಷತಾ ಪರಿಕರಗಳನ್ನು ಒದಗಿಸಿರುವ ಸಂಬಂಧ ನಿಗಮದಿಂದ ಅಥವಾ ಕಾರ್ಮಿಕ ಇಲಾಖೆ. ಪಿಎಫ್, ಇಎಸ್‌ಐ ಇತರೆ ಸಂಸ್ಥೆ/ಸರ್ಕಾರಿ ಇಲಾಖೆ/ಸಂಬಂಧಪಟ್ಟ ಇಲಾಖೆಗಳಿಂದ ಕೋರುವ ಸಂಬಂಧಪಟ್ಟ ದಾಖಲೆಗಳನ್ನು ತಪಾಸಣೆಗೆ ಕೇಳಿದಾಗ ಸಲ್ಲಿಸುವುದು. ಇದರಿಂದಾಗುವ ದೂರು/ವ್ಯಾಜ್ಯಗಳನ್ನು ಪರವಾನಗಿದಾರರೇ ಪರಿಹರಿಸಿಕೊಳ್ಳುವುದು.

50. ಆಯ್ಕೆಯಾದ ಪರವಾನಗಿದಾರರು ಮದ್ದೂರು ಮಿಡ್ ವೇ ಪ್ಲಾಜಾದಲ್ಲಿನ ಶೌಚಾಲಯ/ಮೂತ್ರಾಲಯ ಬಳಕೆಗೆ ಪ್ರಯಾಣಿಕರಿಂದ/ಸಾರ್ವಜನಿಕರಿಗೆ ಯಾವುದೇ ಶುಲ್ಕವನ್ನು ವಿಧಿಸುವಂತಿಲ್ಲ. ಉಚಿತವಾಗಿ ಬಳಕೆಗೆ ನೀಡುವುದು.
51. ಮದ್ದೂರು ಮಿಡ್ ವೇ ಪ್ಲಾಜಾದ ಯುಜಿಡಿ ಕಾಮಗಾರಿ ಹಾಗೂ ಮದ್ದೂರು ನಗರ/ಪುರ ಸಭೆಯವರು ಮದ್ದೂರು ಪಟ್ಟಣದ ಯುಜಿಡಿ ಕಾಮಗಾರಿ ನಡೆಸುತ್ತಿದ್ದು, ಸದರಿಯವರು ಯುಜಿಡಿ ಸಂಪರ್ಕದ ಕಾಮಗಾರಿ ಪೂರ್ಣ ಮುಗಿದ ನಂತರವಷ್ಟೇ ಯುಜಿಡಿ ಕಾರ್ಯರೂಪಕ್ಕೆ ಬರುವುದರಿಂದ ಈ ಸಂಬಂಧ ಯುಜಿಡಿ ಸಂಪರ್ಕ ಕಲ್ಪಿಸುವ ಕಾಮಗಾರಿ ಪೂರ್ಣಗೊಳ್ಳುವವರೆಗೂ ಮದ್ದೂರು ಮಿಡ್ ವೇ ಪ್ಲಾಜಾ ಶೌಚಾಲಯ/ ಮೂತ್ರಾಲಯದ ಹಾಗೂ ಇತರೆ ಘನ ತ್ಯಾಜ್ಯ ವಿಲೇವಾರಿಗೆ ಪಿಟ್ ವ್ಯವಸ್ಥೆಯಲ್ಲೇ ನಿರ್ವಹಿಸಲು ಮತ್ತು ಸದರಿ ಪಿಟ್‌ನ್ನು ಕಾಲಕಾಲಕ್ಕೆ ಯಂತ್ರಗಳ ಮೂಲಕವಷ್ಟೇ ಆಯ್ಕೆಯಾದ ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲೇ ಖಾಲಿಮಾಡಿಸಿಕೊಳ್ಳುವುದು. ಯುಜಿಡಿ/ಡ್ರೇನೇಜ್ ಇತರೆ ತ್ಯಾಜ್ಯ ಹೊರಹೋಗುವ ಸ್ಥಳಗಳ ನಿರ್ವಹಣೆಯನ್ನು ಯಂತ್ರಗಳ ಮೂಲಕ ನಿರ್ವಹಿಸಿಕೊಳ್ಳುವುದು ಆಯ್ಕೆಯಾದ ಪರವಾನಗಿದಾರರ ಪೂರ್ಣ ಜವಾಬ್ದಾರಿಯಾಗಿರುತ್ತದೆ. ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕಡ್ಡಾಯವಾಗಿ ನಿಷೇಧಿಸಿದೆ.(ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಪರಾದ).
52. ಆಯ್ಕೆಯಾದ ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲೇ ಮದ್ದೂರು ಮಿಡ್ ವೇ ಪ್ಲಾಜಾದಲ್ಲಿ ಸಂಗ್ರಹವಾಗುವ/ಉತ್ಪತ್ತಿಯಾಗುವ ತ್ಯಾಜ್ಯವಸ್ತುಗಳನ್ನು ಸಂಬಂಧಪಟ್ಟ ನಗರ/ಪುರಸಭೆಯವರು ಸೂಚಿಸುವ ಸ್ಥಳಕ್ಕೆ ವಿಲೇವಾರಿ ಮಾಡುವುದು.
53. ಪ್ಲಾಜಾದಲ್ಲಿ ನಿಯೋಜಿಸಿಕೊಳ್ಳುವ ಕಾರ್ಮಿಕರಿಗೆ ಕಾರ್ಮಿಕ ಕಾಯ್ದೆಯನ್ವಯ ಕನಿಷ್ಟ ವೇತನ, ಪಿಎಫ್, ಇಎಸ್‌ಐ ಹಾಗೂ ಇತರೆ ಶಾಸನಿಕ ಸೌಲಭ್ಯಗಳನ್ನು ಒದಗಿಸುವುದು ಮತ್ತು ಸದರಿ ಪಾವತಿಯ ಸಂಬಂಧ ರಿಜಿಸ್ಟರ್ ನಿರ್ವಹಿಸುವುದು. ಸದರಿ ಕನಿಷ್ಟ ವೇತನ ಪಾವತಿಸಿರುವ ಮತ್ತು ಪಿಎಫ್, ಇಎಸ್‌ಐ ಪಾವತಿಸಿರುವ ಸಂಬಂಧ ದಾಖಲೆಗಳನ್ನು ಪ್ರತಿ ಮಾಹೆ ನಿಗಮಕ್ಕೆ ಸಲ್ಲಿಸುವುದು.
54. ಆಯ್ಕೆಯಾದ ಪರವಾನಗಿದಾರರು ಮದ್ದೂರು ಮಿಡ್ ವೇ ಪ್ಲಾಜಾದ ನೀರಿನ ಮೋಟರ್ ವಿದ್ಯುತ್ ಶುಲ್ಕ ಮತ್ತು ಪ್ಲಾಜಾದ ವಿದ್ಯುತ್ ಶುಲ್ಕವನ್ನು ಪ್ರತಿ ಮಾಹೆ ಸಂಬಂದಪಟ್ಟ ವಿದ್ಯುತ್ ಪ್ರಸರಣ ನಿಗಮಕ್ಕೆ ಪಾವತಿಸಿಕೊಳ್ಳಬೇಕು.
55. ಆಯ್ಕೆಯಾದ ಪರವಾನಗಿದಾರರು ಮದ್ದೂರು ಮಿಡ್ ವೇ ಪ್ಲಾಜಾಕ್ಕೆ ನಗರ ಸಭೆ/ಪುರ ಸಭೆಯಿಂದ ನೀರಿನ ಸಂಪರ್ಕ ಹೊಂದಿದ್ದಲ್ಲಿ ತಾವೇ ಸಂಬಂಧ ನೀರಿನ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಪ್ರತಿ ಮಾಹೆ ಪಾವತಿಸಬೇಕು.
56. ಮಿಡ್ ವೇ ಪ್ಲಾಜಾದಲ್ಲಿ ಉತ್ತಮ ಗುಣಮಟ್ಟದ ಶುಚಿ ಹಾಗೂ ರುಚಿಯಾದ ಆರೋಗ್ಯಕರ ಸಸ್ಯಹಾರಿ ಆಹಾರವನ್ನು ಪ್ರಯಾಣಿಕರಿಗೆ ಆಹಾರದ ಮಾನದಂಡಗಳ ಪ್ರಕಾರ ಹಾಗೂ ಕೈಗೆಟಕುವ/ಸ್ಪರ್ದಾತ್ಮಕ ಬೆಲೆಯಲ್ಲಿ ಆಹಾರವನ್ನು ಒದಗಿಸುವುದು. ಕಾನೂನು ಬಾಹಿರ ವ್ಯವಹಾರ/ಚಟುವಟಿಕೆ/ವಸ್ತುಗಳ ಮಾರಾಟವನ್ನು ನಿಷೇಧಿಸಿದೆ.
57. ಮಿಡ್ ವೇ ಪ್ಲಾಜಾದಲ್ಲಿ ಔಷಧಿಗಳು, ದೂರವಾಣಿ ಬೂತ್, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಕಾನೂನು ಬಾಹಿರವಾಗಿರುವ ಪಟಾಕಿ, ಗನ್ನುಗಳು, ಸಿಡಿಮದ್ದುಗಳು, ತಂಬಾಕುಯುಕ್ತ ಪದಾರ್ಥಗಳು, ಮದ್ಯದ ಮಾರಾಟ, ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್ & ಗ್ಯಾಸ್, ಗ್ಯಾಸ್ ಸಿಲಿಂಡರ್, ಟ್ರಾವೆಲ್ / ಟ್ರಾನ್ಸ್‌ಪೋರ್ಟ್ ಏಜೆನ್ಸಿ, ಟಿಕೇಟ್ ಬುಕಿಂಗ್, ಇತ್ಯಾದಿ ಕಾನೂನು ಮತ್ತು ನಿಗಮದ ವತಿಯಿಂದ ನಿಷೇಧಿಸಲ್ಪಟ್ಟ ಹಾಗೂ ಮುಂದೆ ನಿಷೇಧಿಸಲ್ಪಡುವ ವಸ್ತುಗಳು ಮಾರಾಟ ಮಾಡುವಂತಿಲ್ಲ.
58. ಮಿಡ್ ವೇ ಪ್ಲಾಜಾದಲ್ಲಿ ಉತ್ತಮ ಗುಣಮಟ್ಟದ ಸೇವೆ, ಉತ್ತಮ ಗುಣಮಟ್ಟದ ಆಹಾರ ಒದಗಿಸುವ ಹಾಗೂ ಇತರೆ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ/ ಬಳಕೆದಾರರಿಂದ ದೂರುಗಳು ಬಂದಲ್ಲಿ ಬಳಕೆದಾರರ ದೂರುಗಳಾದಾರಿತ ಈ ಕೆಳಕಂಡಂತೆ ದಂಡ ವಿಧಿಸಲಾಗುವುದು ಹಾಗೂ ದೂರಿನ/ಸಲಹೆ/ಪ್ರತಿಕ್ರಿಯೆಯ ರಿಜಿಸ್ಟರ್‌ನ್ನು ನಿರ್ವಹಿಸುವುದು.

    ದಂಡದ ವಿವರ ಈ ಕೆಳಕಂಡಂತೆ ವಿಧಿಸಲಾಗುವುದು.

    1.1ನೇ ಬಾರಿಗೆ ರೂ.2500/- ದಂಡ ವಿಧಿಸಲಾಗುವುದು.

    2.2ನೇ ಬಾರಿಗೆ ರೂ.5000/- ದಂಡ ವಿಧಿಸಲಾಗುವುದು.

    3.ನಂತರ ಮರುಕಳಿಸುವ ದೂರುಗಳಿಗೆ ಪ್ರತಿ ದೂರಿಗೆ ರೂ.10000/-ಗಳನ್ನು ವಿಧಿಸಲಾಗುವುದು ಮತ್ತು ದಂಡದ ಮೇಲೆ ಜಿಎಸ್‌ಟಿ ಪ್ರತ್ಯೇಕ ಪಾವತಿಸಬೇಕಿರುತ್ತದೆ. ಸದರಿ ದಂಡದ ಮೊತ್ತವನ್ನು ಮುಂದಿನ ಪರವಾನಗಿ ಶುಲ್ಕದೊಂದಿಗೆ ಪಾವತಿಸಬೇಕಿರುತ್ತದೆ.
59. ಮಿಡ್ ವೇ ಪ್ಲಾಜಾವನ್ನು ತಪಾಸಣೆ/ಪರಿಶೀಲನೆಯನ್ನು ಮಾಡುವ ಮತ್ತು ಪರಿಶೀಲಿಸಿ ಪ್ರಯಾಣಿಕರಿಗೆ ಉತ್ತಮ ಸೇವೆ ನೀಡುವ ನಿಟ್ಟನಲ್ಲಿ ನಿರ್ವಹಣೆ ಮಾಡಲು ಸಲಹೆಗಳನ್ನು ನೀಡಲು ನಿಗಮವು ಹಕ್ಕನ್ನು ಹೊಂದಿರುತ್ತದೆ.
60. ಜಾಹಿರಾತು ಫಲಕಗಳಲ್ಲಿ ಯಾವುದೇ ಕಾನೂನಬಾಹಿರ/ಅಶ್ಲೀಲ ಚಿತ್ರಗಳನ್ನು/ಅಭಿವ್ಯಕ್ತಿ ಸ್ವಾತಂತ್ರಕ್ಕೆ ಧಕ್ಕೆ ತರುವ/ನಿಗಮ/ಸರ್ಕಾರಕ್ಕೆ ಯಾವುದೇ ವಿರುದ್ದವಾದ ಜಾಹಿರಾತುಗಳನ್ನು ಅಳವಡಿಸುವಂತಿಲ್ಲ.
61. ಒಂದು ಪಕ್ಷ ಪ್ಲಾಜಾದ ಕಟ್ಟಡವು ಪ್ರಕೃತಿ ವಿಕೋಪ/ಗಲಭೆ/ನಾಗರೀಕ ಅಡಚಣೆಗಳು/ಯುದ್ಧದಿಂದಾಗಿ ನಾಶವಾದಲ್ಲಿ/ದುರಸ್ಥಿಯಾದಲ್ಲಿ/ಉಪಯೋಗಕ್ಕೆ ಬಾರದ ರೀತಿಯಾದಲ್ಲಿ ಕರಾರು ಒಪ್ಪಂದವು ತನಗೆ ತಾನೇ ರದ್ದಾಗುತ್ತದೆ.
62. ಆಯ್ಕೆಯಾದ ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಮಿಡ್ ವೇ ಪ್ಲಾಜಾದಲ್ಲಿ ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಆಸನಗಳ/ಪೀಟೋಪಕರಣಗಳನ್ನು ಅಳವಡಿಸುವುದು ಹಾಗೂ ಬಸ್ ನಿಲುಗಡೆ ಸ್ಥಳ/ಓಡಾಡುವ ಸ್ಥಳ ಸುಸ್ಥಿತಿಯಲ್ಲಿಲ್ಲದ ಪಕ್ಷದಲ್ಲಿ ವಾಹನಗಳ ಹಾಗೂ ಪ್ರಯಾಣಿರ ಸುಗಮ ಸಂಚಾರ/ಓಡಾಡಕ್ಕೆ ಡಾಂಬರೀಕರಣ ಮಾಡಿಕೊಳ್ಳುವುದು.
63. ಆಯ್ಕೆಯಾದ ಪರವಾನಗಿದಾರರು ಮದ್ದೂರು ಮಿಡ್ ವೇ ಪ್ಲಾಜಾದ ಶೇ.50ರಷ್ಟು ಆಸ್ತಿ ತೆರಿಗೆಯನ್ನು ಪ್ರತಿ ವರ್ಷ ಮೇ-31ನೇ ತಾರೀಖಿನೊಳಗಾಗಿ ನಿಗಮಕ್ಕೆ ಪಾವತಿಸುವುದು.
64. ಮದ್ದೂರು ಮಿಡ್ ವೇ ಪ್ಲಾಜಾದ ವಿಸ್ತೀರ್ಣದಲ್ಲಿ 2000 ಚದರ ಅಡಿಗಳಿಗೆ ಜಾಹಿರಾತು ಫಲಕಗಳನ್ನು ಅಳವಡಿಸಿಕೊಳ್ಳಬಹುದಾಗಿದ್ದು ಹೆಚ್ಚಿನ ಸ್ಥಳಕ್ಕೆ ಅವಕಾಶವಿರುವುದಿಲ್ಲ. ಸದರಿ ಜಾಹಿರಾತು ಫಲಕ ಅಳಡಿಸಿಕೊಳ್ಳಲಿ/ಅಳವಡಿಸಿಕೊಳ್ಳದಿರಲಿ ನಿಗಧಿತ ಪರವಾನಗಿ ಶುಲ್ಕವನ್ನು ಪ್ರತಿ ಮಾಹೆ ಪೂರ್ಣ ಪಾವತಿಸಬೇಕು.
65. ಮದ್ದೂರು ಮಿಡ್ ವೇ ಪ್ಲಾಜಾದ ಕಾಮಗಾರಿಯನ್ನು ನಿಗಮದಿಂದ ಕೈಗೊಂಡಿದ್ದಲ್ಲಿ ಕಾಮಗಾರಿ ಶಾಖೆಯವರು ನೀಡುವ ಮುಕ್ತಾಯದ ದಿನಾಂಕದಿಂದ ಕರಾರು ಮಾಡಿಕೊಳ್ಳುವುದು.
66. ಮದ್ದೂರು ಮಿಡ್ ವೇ ಪ್ಲಾಜಾಗೆ ಹೋಟೆಲ್ & ಮಳಿಗೆಗೆ ಅನ್ವಯವಾಗುವ ಇತರೆ ಎಲ್ಲಾ ಷರತ್ತು ಮತ್ತು ನಿಬಂದನೆಗಳು ಅನ್ವಯವಾಗುತ್ತದೆ.
67. ಪರವಾನಗಿದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಳಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು. ಇದಲ್ಲದೆ, ಪರವಾನಗಿದಾರರಿಗೆ ಕೆಳಕಂಡಂತೆ ದಂಡ ವಿಧಿಸಲಾಗುತ್ತದೆ. ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳುವುದು.

| | | |
|---|---|---|
| ಮೊದಲ ಬಾರಿಗೆ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸುವುದು. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |
| ಎರಡನೇ ಬಾರಿಗೆ ಹಾಗೂ ಪುನರಾವರ್ತನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸುವುದು. ಇದಲ್ಲದೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |

68. ಉಪಹಾರ ಗೃಹ, ಚಾಟ್ ಸೆಂಟರ್, ಮಿಲ್ಕ್ ಪಾರ್ಲರ್, ಹಣ್ಣಿನ ಮಳಿಗೆ, ಲಗೇಜ್ / ಕ್ಲೋಕ್ ರೂಂ, ಕಛೇರಿ ಸ್ಥಳಾವಕಾಶ, ದ್ವಿಚಕ್ರ / ಕಾರು ಪಾರ್ಕಿಂಗ್, ದೂರವಾಣಿ / ಕಾಯಿನ್ ಬೂತ್, ಎ.ಟಿ.ಎಂ. ಕೌಂಟರ್, ಲಾಡ್ಜಿಂಗ್ ಮತ್ತು ಡಾರ್ಮಿಟರಿ, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಔಷಧಿ ಮಳಿಗೆ, ಸರ್ಕಾರಿ ಮತ್ತು ಅರೆ-ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮಳಿಗೆಗಳನ್ನು ಹೊರತುಪಡಿಸಿ, ಇನ್ನಿತರೆ ಮಳಿಗೆಗಳಿಗೆ "ಜನರಲ್ ಸ್ಟಾಲ್" ಎಂದು ನಿಗಧಿಪಡಿಸಿದೆ.
69. ಪರವಾನಗಿ ಪಡೆದ ಮಳಿಗೆಗಳಲ್ಲಿ ಸಂಧಾನದಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸಲು ಅವಕಾಶವಿರುವುದಿಲ್ಲ.
70. ಜನರಲ್ ಸ್ಟಾಲ್‌ಗಳಿಗೆ ಆಯ್ಕೆಯಾದ ಪರವಾನಗಿದಾರರು, ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡಬೇಕಿರುತ್ತದೆ. ಮಾರಾಟ ಮಾಡಲು ನಿಷೇಧಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡುವಂತಿಲ್ಲ. ಸದರಿ ಪಟ್ಟಿಯ ಹೊರತಾಗಿ ಇರುವ ವಸ್ತುಗಳನ್ನು ಮಾರಾಟ ಮಾಡಬೇಕಿದ್ದಲ್ಲಿ, ಪರವಾನಗಿದಾರರು ಕರಾರಿಗೂ ಮುಂಚಿತವಾಗಿ ನಿಗಮದಿಂದ ಪೂರ್ವಾನುಮತಿ ಪಡೆಯಬೇಕಿರುತ್ತದೆ.

| ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಬಹುದಾದ ವಸ್ತು / ಪದಾರ್ಥಗಳು | ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಲು ನಿಷೇಧಿಸಿರುವ ವಸ್ತು / ಪದಾರ್ಥಗಳು |
|---|---|
| ಪುಸ್ತಕ / ದಿನಪತ್ರಿಕೆ / ನಿಯತಕಾಲಿಕೆಗಳು ಮತ್ತು ಸ್ಟೇಷನರಿ ವಸ್ತುಗಳು, ಮಾರ್ಜಕ / ಸಾಬೂನುಗಳು/ ಹಣ್ಣು / ಹೂಗಳು, ಜೆರಾಕ್ಸ್, ಪ್ಯಾಕ್ ಆಗಿರುವ ಬಿಸ್ಕೆಟ್ಸ್ / ಜ್ಯೂಸ್, ಬೇಕರಿ ತಿನಿಸುಗಳು, ನೀರಿನ ಬಾಟಲ್, ಮೊಬೈಲ್ ಕರೆನ್ಸಿ, ಸೌಂದರ್ಯವರ್ಧಕಗಳು, ಅಲಂಕಾರಿಕ ವಸ್ತುಗಳು, ಕೊಡುಗೆ ನೀಡುವ ವಸ್ತುಗಳು, ಫ್ಯಾನ್ಸಿ ಸ್ಟೋರ್‌ನಲ್ಲಿ ಮಾರಾಟ ಮಾಡುವ ವಸ್ತುಗಳು,<br>ಈ ಮಳಿಗೆಗಳಲ್ಲಿ ಗ್ಯಾಸ್ / ಸ್ಟೌವ್ ಬಳಕೆಗೆ ಅವಕಾಶವಿಲ್ಲ. | ಬೇಯಿಸಿದ ಪದಾರ್ಥಗಳಾದ ಕಾಫಿ, ಟೀ, ಉಪಹಾರ, ಊಟ, ಮಾಂಸ, ಹಾಲು ಇತ್ಯಾದಿಗಳು, ಔಷಧಿಗಳು, ದೂರವಾಣಿ ಬೂತ್, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಕಾನೂನು ಬಾಹಿರವಾಗಿರುವ ಪಟಾಕಿ, ಗನ್ನುಗಳು, ಸಿಡಿಮದ್ದುಗಳು, ತಂಬಾಕುಯುಕ್ತ ಪದಾರ್ಥಗಳು, ಮದ್ಯದ ಮಾರಾಟ, ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್ & ಗ್ಯಾಸ್, ಗ್ಯಾಸ್ ಸಿಲಿಂಡರ್, ಟ್ರಾವೆಲ್ / ಟ್ರಾನ್ಸ್‌ಪೋರ್ಟ್ ಏಜೆನ್ಸಿ, ಟಿಕೇಟ್ ಬುಕಿಂಗ್, ಇತ್ಯಾದಿ ಕಾನೂನು ಮತ್ತು ನಿಗಮದ ವತಿಯಿಂದ ನಿಷೇಧಿಸಲ್ಪಟ್ಟ ಹಾಗೂ ಮುಂದೆ ನಿಷೇಧಿಸಲ್ಪಡುವ ವಸ್ತುಗಳು. |

71. ವಾಣಿಜ್ಯ ಮಳಿಗೆ/ಉಪಹಾರ ಗೃಹ/ಲಾಡ್ಜ್ ಮತ್ತು ಇತರೆ ಎಲ್ಲಾ ಮಳಿಗೆಗಳಲ್ಲಿ ಪರವಾನಗಿದಾರರು ಮಾರಾಟ ಮಾಡುವ ವಸ್ತುಗಳನ್ನು, ಅವುಗಳ ಮೇಲೆ ನಮೂದಿಸಲಾದ ಗರಿಷ್ಠ ಮೊತ್ತಕ್ಕೆ / MRP (Maximum Retail Price) ಮೀರದಂತೆ ಮಾರಾಟ ಮಾಡಬೇಕು. ವಸ್ತುಗಳನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.500/-, 2ನೇ ಪ್ರಕರಣಕ್ಕೆ ರೂ.1,000/- ಮತ್ತು 3ನೇ ಪ್ರಕರಣಕ್ಕೆ ರೂ.2,000/- ದಂಡ ವಿಧಿಸುವುದು. ಇದು ಪುನರಾವರ್ತನೆಗೊಂಡಲ್ಲಿ, ರೂ.2,000/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
72. ವಾಣಿಜ್ಯ ಮಳಿಗೆ/ಉಪಹಾರ ಗೃಹ/ಲಾಡ್ಜ್ ಮತ್ತು ಇತರೆ ಎಲ್ಲಾ ಮಳಿಗೆಗಳಲ್ಲಿ ಪರವಾನಗಿದಾರರು ನಿಗಧಿತ ವಸ್ತುಗಳನ್ನು ಹೊರತುಪಡಿಸಿ, ಇತರೆ ವಸ್ತುಗಳನ್ನು ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.1,000/-, 2ನೇ ಪ್ರಕರಣಕ್ಕೆ ರೂ.2,000/- ಮತ್ತು 3ನೇ ಪ್ರಕರಣಕ್ಕೆ ಅಥವಾ ತದನಂತರ ರೂ.5,000/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
73. ಇನ್ನಿತರ ವಾಣಿಜ್ಯ ಮಳಿಗೆಗಳಿಗೆ ಅನ್ವಯಿಸುವ ನಿಯಮ / ನಿಬಂಧನೆಗಳು ಈ ಪರವಾನಗಿದಾರರಿಗೂ ಅನ್ವಯವಾಗುತ್ತವೆ.
74. ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಉಪ-ಪರವಾನಗಿ ನೀಡಿರುವುದು ಕಂಡು ಬಂದಲ್ಲಿ / ಸಾಬೀತಾದಲ್ಲಿ, ತಕ್ಷಣದಿಂದ ಜಾರಿಗೆ ಬರುವಂತೆ ಪರವಾನಗಿಯನ್ನು ರದ್ದುಪಡಿಸಿ, ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
75. ಸಂಧಾನದಲ್ಲಿ ಆಯ್ಕೆಯಾಗದ ಬಿಡ್‌ದಾರರುಗಳ (H1, H2 & H3 ಹೊರತುಪಡಿಸಿ) ಇ.ಎಂ.ಡಿ. ಮೊತ್ತವನ್ನು ಆಯ್ಕೆ ಅಂತಿಮಗೊಂಡ ನಂತರ ಹಿಂದಿರುಗಿಸಲಾಗುವುದು. H2 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು. H3 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 or H2 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.
76. ಸಂಧಾನದಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್‌ಮಾಡಿ ಪರವಾನಗಿದಾರರಾಗಿ ಆಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಲು ಹಾಗೂ ಕರಾರು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
77. ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ ಹಾಗೂ ನಿಗದಿತ ದಿನಾಂಕದಲ್ಲಿ ವ್ಯವಹಾರ ಪ್ರಾರಂಭಿಸದೆ ಇದ್ದಲ್ಲಿ ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

78. H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
79. ಸಂಧಾನದಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ / ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್/ಸಂಧಾನದಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
80. ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್/ಸಂಧಾನದಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
81. ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಮಳಿಗೆಯನ್ನು ಉಪ–ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್/ಸಂಧಾನದಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.
82. ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್ / ಸಂಧಾನದ್ಲಲ್ಲಿ ಭಾಗವಹಿಸಿದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
83. ಮುಷ್ಕರ / ಬಂದ್ ಅವಧಿಯಲ್ಲಿ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.
84. ಪರವಾನಗಿದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ., ಆದಾಯ ತೆರಿಗೆ, ಭವಿಷ್ಯ ನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸೆನ್ಸ್, ಲೇಬರ್ ಲೈಸೆನ್ಸ್, ಫುಡ್ ಲೈಸೆನ್ಸ್ ಇತ್ಯಾದಿ ಪ್ರಮಾಣಪತ್ರಗಳನ್ನು ಹೊಂದಿರಬೇಕು.
85. ಆಯ್ಕೆಗೊಂಡ ಪರವಾನಗಿದಾರರು, ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (Employees Provident Fund Organisation) ರವರಲ್ಲಿ ನೋಂದಣಿ ಮಾಡಿಸಿಕೊಂಡಿರಬೇಕು. ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಸಿ.ಎಫ್.ಸಿ. ರವರಿಗೆ ಜಮಾ ಮಾಡಬೇಕು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
86. ಆಯ್ಕೆಗೊಂಡ ಪರವಾನಗಿದಾರರು, ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್‌ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
87. ಆಯ್ಕೆಗೊಂಡ ಪರವಾನಗಿದಾರರು, ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಕನಿಷ್ಟ ವೇತನ, ಪಿ.ಎಫ್, ಇಎಸ್‌ಐ ಸೌಲಭ್ಯ ನೀಡುವುದು ಮತ್ತು ಪಾವತಿಸಿರುವ ಚಲನ್‌ಗಳನ್ನು ನಿಗಮಕ್ಕೆ ಕಾಲಕಾಲಕ್ಕೆ ಸಲ್ಲಿಸುವುದು.
88. ಬಾಲಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
89. ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ ಸಂದಾಯ ಮಾಡಬೇಕು. ಸಂಬಂಧಪಟ್ಟ ತೆರಿಗೆ ಇಲಾಖೆಯಿಂದ ಚಾಲ್ತಿಯಿರುವ ಪ್ರಮಾಣ ಪತ್ರವನ್ನು ಹೊಂದಿರುವುದು ಹಾಗೂ ಕಾಲ ಕಾಲಕ್ಕೆ ನವೀಕರಿಸಿಕೊಳ್ಳುವುದು.
90. ನಿಗಮದ ವ್ಯವಹಾರಕ್ಕೆ ವ್ಯತಿರಿಕ್ತ ಪರಿಣಾಮ ಉಂಟುಮಾಡುವ ವ್ಯವಹಾರವನ್ನು, ನಿಗಮದ ವತಿಯಿಂದ ನಿಷೇದಿಸಲ್ಪಟ್ಟ, ಮುಂದೆ ನಿಷೇಧಿಸಲ್ಪಡುವ ವಸ್ತುಗಳು ಮತ್ತು ಕಾನೂನುಬಾಹಿರ ವಸ್ತುಗಳ ಮಾರಾಟವನ್ನು ಮಳಿಗೆಗಳಲ್ಲಿ ನಿಷೇಧಿಸಲಾಗಿದೆ. ಈ ರೀತಿಯ ವಸ್ತುಗಳ ಮಾರಾಟ ಕಂಡುಬಂದಲ್ಲಿ, ಪರವಾನಗಿಯನ್ನು ರದ್ದುಪಡಿಸುವುದು ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು.
91. ಆಯ್ಕೆಗೊಂಡ ಪರವಾನಗಿದಾರರು ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ಅಗ್ನಿ ರಕ್ಷಕ / ಶಾಮಕ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸುವುದು. ಅಗ್ನಿ ಅವಘಡ ಹಾಗೂ ಇತರೆ ನೈಸರ್ಗಿಕ ದುರಂತಗಳಿಗೆ ನಿಗಮವು ಜವಾಬ್ದಾರಿಯಾಗಿರುವುದಿಲ್ಲ
92. ಲಾಡ್ಜಿಂಗ್ & ಡಾರ್ಮಿಟರಿ, ಉಪಹಾರ ಗೃಹ, ಬೇಕರಿ ಮಳಿಗೆಗಳು, ಚಾಟ್ಸ್ ಸೆಂಟರ್ ಇವುಗಳನ್ನು ಹೊರತುಪಡಿಸಿ, ಇತರೆ ಮಳಿಗೆಗಳಲ್ಲಿ ಎಲ್ಲಾ ಮಾದರಿಯ ಸ್ಟೌವ್ / ಗ್ಯಾಸ್ ಬಳಕೆಯನ್ನು ನಿಷೇಧಿಸಲಾಗಿದೆ.
93. ಉಪಹಾರ ಗೃಹಗಳಲ್ಲಿ ಅಡಿಗೆ ಅನಿಲ ಮತ್ತು ವಿದ್ಯುತ್ ಮಾತ್ರ ಉಪಯೋಗಿಸುವುದು. ಉಪಹಾರಗೃಹದಲ್ಲಿ ಕಡ್ಡಾಯವಾಗಿ ಅಗ್ನಿ ರಕ್ಷಕ ಉಪಕರಣ ಅಳವಡಿಸುವುದು.
94. ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.
95. ಯಾವುದೇ ಕಾರಣ ನೀಡದೇ ಸಂಧಾನವನ್ನು/ಅರ್ಜಿಗಳನ್ನು ಪುರಸ್ಕರಿಸುವ/ತಿರಸ್ಕರಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
96. ನಿಗಮದಿಂದ ಕರೆಯಲಾಗುವ ಯಾವುದೇ ಸಂಧಾನವನ್ನು ಯಾವುದೇ ಸಮಯದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
97. ತೆರೆದ ಸ್ಥಳ/ಶಾಶ್ವತ ಮಳಿಗೆಗಳನ್ನು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ, ಯಾವಸ್ಥಳದಲ್ಲಿದೆಯೋ ಅದೇ ಸ್ಥಳದಲ್ಲೇ ನೀಡಲಾಗುವುದು ಮತ್ತು ಸಂಧಾನದಲ್ಲಿ ನೀಡಿರುವ/ನಮೂದಿಸಿರುವ ಸ್ಥಳದಲ್ಲಿ ಮಾತ್ರ ವ್ಯವಹಾರ ನಡೆಸತಕ್ಕದ್ದು.
98. ಆಯ್ಕೆಯಾದ ಪರವಾನಗಿದಾರರು ಮಳಿಗೆಯಲ್ಲಿ ಆಹಾರ ಪದಾರ್ಥಗಳ ದರಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಅಳವಡಿಸುವುದು.
99. ಆಯ್ಕೆಗೊಂಡ ಪರವಾನಗಿದಾರರು ಅವರ ಸಿಬ್ಬಂದಿಗಳಿಗೆ ಮೂಲವೇತನ ಕಾಯ್ದೆಯಡಿ, ಕನಿಷ್ಟ ಮೂಲವೇತನ ನೀಡುವುದು ಹಾಗೂ ಇಎಸ್‌ಐ ಮತ್ತು ಪಿಎಫ್ ಮೊತ್ತವನ್ನು ನಿಯಮಾವಳಿಗಳನ್ವಯ ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಯಲ್ಲಿ ಆನ್‌ಲೈನ್ ಮುಖಾಂತರ ಪಾವತಿಸುವುದು ಹಾಗೂ ದಾಖಲೆಗಳನ್ನು ಕೆಎಸ್‌ಆರ್‌ಟಿಸಿ., ಅಧಿಕಾರಿಗಳು ಪರಿಶೀಲನೆಗೆ ಕೇಳಿದಾಗ ಪ್ರಸ್ತುತಪಡಿಸಬೇಕಾಗಿರುತ್ತದೆ.

100. ಆಯ್ಕೆಯಾದ ಪರವಾನಿಗೆದಾರರು ಮಳಿಗೆಯ ಮುಂದೆ ಸಾರ್ವಜನಿಕರಿಗೆ ಕಾಣುವ ರೀತಿ ಎಂ.ಆರ್.ಪಿ.ಗಿಂತ ಹೆಚ್ಚಿನ ದರ ವಿಧಿಸಲಾಗುವುದಿಲ್ಲವೆಂಬ ಫಲಕವನ್ನು ಅಳವಡಿಸುವುದು.
101. ಮಳಿಗೆಗಳು/ಸೈಕಲ್/ಸ್ಕೂಟರ್ ನಿಲ್ದಾಣ ನಡೆಸಲು ಆಯ್ಕೆಯಾದ ಪರವಾನಿಗೆದಾರರು ಅಗತ್ಯವಿರುವ ಎಲ್ಲಾ ಪರವಾನಿಗೆ/ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆದುಕೊಂಡು ವ್ಯವಹಾರ ನಡೆಸುವುದು.
102. ಆಯ್ಕೆಯಾಗಿ ಕರಾರು ಮಾಡಿಕೊಂಡಿರುವ ಉಪಹಾರ ಗೃಹಗಳ ಪರವಾನಗಿಯನ್ನು ಮತ್ತೊಂದು ಅವಧಿಗೆ ಮಾತ್ರ(05+05 ವರ್ಷಗಳು) ನವೀಕರಣಕ್ಕೆ ಅವಕಾಶ ಕಲ್ಪಿಸಲಾಗುವುದು. ಸದರಿ ಪರವಾನಗಿದಾರರ ಮನವಿ ಮೇರೆಗೆ, ಪರವಾನಗಿ ಅವಧಿಯಲ್ಲಿನ ಉಪಹಾರಗೃಹದ ನಿರ್ವಹಣೆಯ ಗುಣಮಟ್ಟ ಮತ್ತು ಮಾಸಿಕ ಪರವಾನಗಿ ಶುಲ್ಕ ಪಾವತಿಯನ್ನು ಪರಿಗಣಿಸಿ, ಪರವಾನಗಿ ಶುಲ್ಕದಲ್ಲಿ 6ನೇ ವರ್ಷದಲ್ಲಿ ಶೇ.15ರಷ್ಟು ಹಾಗೂ ತದನಂತರ ಪ್ರತಿವರ್ಷ ಶೇ.10ರಷ್ಟು ಹೆಚ್ಚಳದ ಷರತ್ತಿನೊಂದಿಗೆ 5ವರ್ಷಗಳಿಗೆ ನವೀಕರಿಸಲಾಗುವುದು. ಉಪಹಾರಗೃಹ ಪರವಾನಗಿದಾರರು ನವೀಕರಣಕ್ಕೆ ಇಚ್ಛಿಸಿದ್ದಲ್ಲಿ, 6ತಿಂಗಳ ಮುಂಚಿತವಾಗಿ ಮನವಿ ಸಲ್ಲಿಸಬೇಕು. ಕರಾರು ನವೀಕರಣದ ತೀರ್ಮಾನದ ಹಕ್ಕನ್ನು ನಿಗಮವು ಕಾಯ್ದಿರಿಸಿದೆ.
103. ಆಯ್ಕೆಯಾದ ಪರವಾನಗಿದಾರರು ಕಡ್ಡಾಯವಾಗಿ ಮಳಿಗೆಯಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾವನ್ನು ಅಳವಡಿಸಿಕೊಳ್ಳುವುದು.
104. ಜಿಲ್ಲಾಕೇಂದ್ರ ಬಸ್ ನಿಲ್ದಾಣದಲ್ಲಿನ ದ್ವಿ-ಚಕ್ರ ವಾಹನಗಳ ಪಾರ್ಕಿಂಗ್ ದರಗಳು:

| **ಸಮಯ** | 0–2 | 2–4 | 4–8 | 8–12 | 12–24 | 24 ಗಂಟೆ ಮೇಲ್ಪಟ್ಟು |
|---|---|---|---|---|---|---|
| **ದರ(ರೂ.ಗಳಲ್ಲಿ)** | **5/-** | **10/-** | **15/-** | **20/-** | **25/-** | **ಪ್ರತಿ ದಿನಕ್ಕೆ ರೂ.25/-** |

105. ತಾಲ್ಲೂಕು /ಇತರೆ ಬಸ್ ನಿಲ್ದಾಣಗಳ ದ್ವಿ-ಚಕ್ರ ವಾಹನಗಳ ಪಾರ್ಕಿಂಗ್ ದರಗಳು:

| **ಸಮಯ** | 0–2 | 2–4 | 4–8 | 8–12 | 12–24 | 24 ಗಂಟೆ ಮೇಲ್ಪಟ್ಟು |
|---|---|---|---|---|---|---|
| **ದರ(ರೂ.ಗಳಲ್ಲಿ)** | 5/- | 5/- | 10/- | 15/- | 20/- | ಪ್ರತಿ ದಿನಕ್ಕೆ ರೂ.20/- |

106. ಜಿಲ್ಲಾ ಕೇಂದ್ರದ ಬಸ್ ನಿಲ್ದಾಣಗಳಲ್ಲಿ ವಾಹನಗಳು ಒಳಬರುವ ಮತ್ತು ಹೊರಹೋಗುವ ಸಮಯವನ್ನು ದಾಖಲಿಸುವ ಪಾರ್ಕಿಂಗ್ ಮೀಟರ್‌ನ್ನು ಅಳವಡಿಸಿಕೊಳ್ಳುವುದು.
107. ಒಬ್ಬ ಗ್ರಾಹಕರು ಮೂರು (03) ದಿನಗಳ ಮೇಲ್ಪಟ್ಟು ನಿರಂತರವಾಗಿ ವಾಹನವನ್ನು ಪಾರ್ಕಿಂಗ್ ಮಾಡಲು ಅವಕಾಶವಿರುವುದಿಲ್ಲ.
108. ಸೈಕಲ್ / ಸ್ಕೂಟರ್ ನಿಲ್ದಾಣ (ದ್ವಿಚಕ್ರ ವಾಹನ ನಿಲ್ದಾಣ) ಮತ್ತು ಕಾರು ನಿಲ್ದಾಣದಲ್ಲಿ ವಾಹನಗಳ ನಿಲುಗಡೆಗೆ ನಿಗದಿಪಡಿಸಿದ ದರಗಳನ್ನು ಮಾತ್ರ ಪಡೆದುಕೊಳ್ಳುವುದು. ಒಂದು ವೇಳೆ ನಿಗದಿತ ದರಕ್ಕಿಂತ ಹೆಚ್ಚಿನ ದರಗಳನ್ನು ಎರಡನೇ ಪಾರ್ಟಿಯು ಪಡೆಯುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ ಮೊದಲ ಐದು ಪ್ರಕರಣಗಳಿಗೆ ತಲಾ ರೂ.500/-ಗಳನ್ನು, ನಂತರದ ಐದು ಪ್ರಕರಣಗಳಿಗೆ ತಲಾ ರೂ.1000/-ಗಳನ್ನು ದಂಡ ವಿಧಿಸಲಾಗುವುದು(ಪ್ರತ್ಯೇಕವಾಗಿ ಜಿಎಸ್‌ಟಿ ಅನ್ವಯವಾಗುತ್ತದೆ). ತದ ನಂತರದ ಪ್ರಕರಣಗಳು ದಾಖಲಾದಲ್ಲಿ ಕರಾರನ್ನು ರದ್ದುಪಡಿಸಲಾಗುವುದು ಹಾಗೂ ಕಪ್ಪುಪಟ್ಟಿಗೆ ಸೇರಿಸಲಾಗುವುದು.
109. ಆಯ್ಕೆಯಾಗುವ ಬಿಡ್‌ದಾರರು ಬಸ್ ನಿಲ್ದಾಣಗಳಲ್ಲಿನ ದ್ವಿಚಕ್ರ ವಾಹನ ನಿಲ್ದಾಣಕ್ಕೆ ಅಂಗವಿಕಲರ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ನಿಲ್ದಾಣದಲ್ಲಿ ಪಾರ್ಕಿಂಗ್ ಮಾಡಲು ಲಭ್ಯವಿರುವ ಸ್ಥಳದಲ್ಲಿ ಕನಿಷ್ಠ ಎರಡು ದ್ವಿಚಕ್ರ / ತ್ರಿಚಕ್ರ / ಕಾರನ್ನು ಅಥವಾ ಲಭ್ಯವಿರುವ ಪಾರ್ಕಿಂಗ್ ಸ್ಥಳದಲ್ಲಿ ಶೇ.2 ರಷ್ಟನ್ನು ಅಂಗವಿಕಲರ ವಾಹನಗಳನ್ನು ಉಚಿತವಾಗಿ ನಿಲ್ಲಿಸಲು ಅವಕಾಶ ಕಲ್ಪಿಸುವುದು.
110. ಇನ್ನಿತರ ವಾಣಿಜ್ಯ ಮಳಿಗೆಗಳಿಗೆ ಅನ್ವಯಿಸುವ ನಿಯಮ / ನಿಬಂಧನೆಗಳು ಈ ಸೈಕಲ್/ಸ್ಕೂಟರ್ ನಿಲ್ದಾಣದ ಪರವಾನಗಿದಾರರಿಗೂ ಅನ್ವಯವಾಗುತ್ತವೆ.
111. ಆಯ್ಕೆಯಾದ ಪರವಾನಗಿದಾರರು ಕನಿಷ್ಠ 02 ವರ್ಷಗಳ ಕಾಲ ಪರವಾನಗಿಯನ್ನು ನಡೆಸಬೇಕು.
112. ಪರವಾನಗಿದಾರರು ಒಂದು ವೇಳೆ 02 ವರ್ಷದೊಳಗೆ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 06 ತಿಂಗಳ ಮುಂಚಿತವಾಗಿ ಮನವಿ ನೀಡಬೇಕು. ಮುಂಚಿತವಾಗಿ ಮನವಿ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ಮನವಿ ನೀಡಿದ 06 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಿಕೊಂಡು ನಡೆಸುವುದು.
113. ಎರಡು ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಎರಡು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಸಂಧಾನ/ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು. ಒಂದು ವೇಳೆ ಪರವಾನಗಿ ರದ್ದತಿಯ ಜಾರಿಯ ದಿನಾಂಕವು ಕರಾರು ಒಪ್ಪಂದದ ಪ್ರಾರಂಭದ ದಿನಾಂಕದಿಂದ 02(ಎರಡು) ವರ್ಷಗಳಿಗೂ ಮೇಲ್ಪಟ್ಟಲ್ಲಿ ಅಂತಹ ಪರವಾನಗಿದಾರರಿಗೆ ಕಪ್ಪುಪಟ್ಟಿಗೆ ಸೇರಿಸುವುದರಿಂದ ವಿನಾಯಿತಿ ಇರುತ್ತದೆ.
114. ಪರವಾನಗಿದಾರರು ಒಂದು ವೇಳೆ 02 ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 04 ತಿಂಗಳ ಮುಂಚಿತವಾಗಿ ಮನವಿ ನೀಡಬೇಕು. ಮುಂಚಿತವಾಗಿ ಮನವಿ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ಮನವಿ ನೀಡಿದ 04 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಿಕೊಂಡು ನಡೆಸುವುದು.
115. ತೆರೆದ ಸ್ಥಳ ಮಳಿಗೆಗಳಿಗೆ ಹಾಲಿ 03 ವರ್ಷಗಳ ಪರವಾನಗಿ ಅವಧಿಯಲ್ಲಿ ಯಾವುದೇ ಡಿಫಾಲ್ಟರ್ ಆಗಿರದೆ ಮಳಿಗೆಯ ಕಾರ್ಯನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ, 4ನೇ ವರ್ಷದಲ್ಲಿ ಶೇ.15ರಷ್ಟು ಹಾಗೂ ತದನಂತರ ಪ್ರತಿ ವರ್ಷ ಶೇ.10ರಷ್ಟು ಪರವಾನಗಿ ಶುಲ್ಕ ಹೆಚ್ಚಳದೊಂದಿಗೆ ತೆರೆದ ಸ್ಥಳದ ವಾಣಿಜ್ಯ ಮಳಿಗೆಗಳಿಗೆ 03 ವರ್ಷಗಳ ಅವಧಿಗೆ ಪರವಾನಗಿ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗುವುದು.
116. ಮೇಲ್ಕಂಡಂತೆ ನವೀಕರಣಕ್ಕೆ ಪರವಾನಗಿದಾರರು ಇಚ್ಛಿಸಿದಲ್ಲಿ, 06 ತಿಂಗಳು ಮುಂಚಿತವಾಗಿ ಮನವಿ ಸಲ್ಲಿಸಬೇಕು. ಕರಾರು ನವೀಕರಣದ ಬಗ್ಗೆ ತೀರ್ಮಾನದ ಹಕ್ಕನ್ನು ನಿಗಮವು ಕಾಯ್ದಿರಿಸಿದ್ದು, ನವೀಕರಣದ ಸಮಯದಲ್ಲಿ ಕೇಂದ್ರ ಕಛೇರಿಯ ವಾಣಿಜ್ಯ ಇಲಾಖೆಯ ಮುಖ್ಯಸ್ಥರ ಅನುಮೋದನೆ ಪಡೆದ ನಂತರವಷ್ಟೇ ಮುಂದುವರೆಸಲು ಅವಕಾಶವಿರುತ್ತದೆ.
117. ಪರವಾನಗಿದಾರರು ಕರಾರಿನ ಅವಧಿ ಮುಗಿಯುವ ದಿನ ಮಳಿಗೆಯನ್ನು/ತೆರೆದ ಸ್ಥಳಗಳಲ್ಲಿ ಸ್ಟ್ರಕ್ಚರ್‌ಗಳನ್ನು ತೆರವುಗೊಳಿಸಲು ವಿಳಂಭ ಮಾಡಿದ್ದಲ್ಲಿ ನಿಗಮವು ತೆಗೆದುಕೊಳ್ಳುವ ಕ್ರಮ:-

| ಕ್ರ.ಸಂ | ವಿಳಂಬದ ದಿನಗಳು | ವಿಧಿಸಬೇಕಿರುವ ದಂಡದ ಮೊತ್ತ ಶೇ. ವಾರು |
|---|---|---|
| 1 | ಮಳಿಗೆಯನ್ನು/ಸ್ಟ್ರಕ್ಚರ್‌ಗಳನ್ನು ತೆರವು ಗೊಳಿಸಲು 07 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ಅಂತಿಮಗಳ ಪರವಾನಗಿ ಶುಲ್ಕದ ಶೇ.25 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದು. |
| 2 | ಮಳಿಗೆಯನ್ನು/ಸ್ಟ್ರಕ್ಚರ್‌ಗಳನ್ನು ತೆರವು ಗೊಳಿಸಲು 07 ದಿನಗಳ ಮೇಲ್ಪಟ್ಟು, 15 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪರವಾನಗಿ ಶುಲ್ಕದ ಶೇ.50 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗಳನ್ನು ವಿಧಿಸಲಾಗುವುದ. |
| 3 | ಮಳಿಗೆಯನ್ನು/ಸ್ಟ್ರಕ್ಚರ್‌ಗಳನ್ನು ತೆರವುಗೊಳಿಸಲು 15 ದಿನಗಳ ಮೇಲ್ಪಟ್ಟು, ಒಂದು ತಿಂಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪೂರ್ಣ ಪರವಾನಗಿ ಶುಲ್ಕದಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳು |

118. ಒಂದು ತಿಂಗಳೊಳಗಾಗಿ ಮಳಿಗೆಯಲ್ಲಿನ ವಸ್ತುಗಳನ್ನು ಹಾಗೂ ತೆರೆದ ಸ್ಥಳಗಳಲ್ಲಿನ (Structure) ಸ್ಟ್ರಕ್ಚರ್‌ನ್ನು ತೆರವುಗೊಳಿಸಲು ವಿಫಲರಾದಲ್ಲಿ ಅವುಗಳನ್ನು ಮುಟ್ಟುಗೊಲು ಹಾಕಿಕೊಂಡು ಪರವಾನಿಗೆದಾಶರರ ಖರ್ಚಿನಲ್ಲಿ ತೆರವುಗೊಳಿಸಲು/ವಿಲೇವಾರಿ ಮಾಡಲು ನಿಗಮದ ವತಿಯಿಂದ ಕ್ರಮಕೈಗೊಳ್ಳಲಾಗುವುದು.

119. ಮಳಿಗೆಯಲ್ಲಿನ ವಸ್ತುಗಳನ್ನು ಮತ್ತು ತೆರೆದ ಸ್ಥಳಗಳಲ್ಲಿನ (Structure) ಸ್ಟ್ರಕ್ಚರ್ ತೆರವುಗೊಳಿಸಿರುವುದನ್ನು ಖಚಿತಪಡಿಸಿಕೊಂಡು, ಬರಬೇಕಾಗಿರುವ ಬಾಕಿ ಮೊತ್ತವನ್ನು ಹೊಂದಾಣಿಕೆ ಮಾಡಿದ ನಂತರ, ಭದ್ರತಾ ಠೇವಣಿಯನ್ನು ಹಿಂದಿರುಗಿಸಲಾಗುವುದು.

120. ಮಳಿಗೆಯ ನಾಮಫಲಕವನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಅಳವಡಿಸಿಕೊಳ್ಳುವುದು. ಪ್ರಧಾನವಾಗಿ ಅಂದರೆ ನಾಮಫಲಕದ ಶೇ.60ರಷ್ಟು ಭಾಗ ಕನ್ನಡವನ್ನು ಬಳಸತಕ್ಕದ್ದು.

121. ನಾಮ ಫಲಕವನ್ನು ಮಳಿಗೆಯ ಸಂಖ್ಯೆ/ಬಸ್ ನಿಲ್ದಾಣದ ಬಣ್ಣವನ್ನು ಹಾಳುಮಾಡುವಂತೆ ಶಾಶ್ವತವಾಗಿ ಬರೆಸುವುದನ್ನು ನಿಷೇಧಿಸಿದೆ.

122. ನಾಮ ಫಲಕವನ್ನು ಸರಳವಾಗಿ ಮಳಿಗೆಯ ವಿಸ್ತೀರ್ಣಕ್ಕೆ ಮಾತ್ರ ಬ್ಯಾನರ್‌ನಲ್ಲಿ ಪ್ರಿಂಟ್ ಮಾಡಿಸಿಕೊಳ್ಳುವುದು ಮತ್ತು ಕರಾರು ಮುಕ್ತಾಯದ ನಂತರ ಪರವಾನಗಿದಾರರೇ ನಿಗಮ ಆಸ್ತಿ ಹಾಳಾಗದಂತೆ/ಬಣ್ಣ ಹಾಳಾಗದಂತೆ ತೆರವುಗೊಳಿಸಿಕೊಳ್ಳಬೇಕು. ತಪ್ಪಿದಲ್ಲಿ ಆಗುವ ನಷ್ಟವನ್ನು ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು.

ಸಹಿ/-

ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ.ನಿಗಮ,ಮಂಡ್ಯ ವಿಭಾಗ, ಮಂಡ್ಯ.

ಗೌರವ ಪೂರ್ವಕವಾಗಿ ಪ್ರತಿಯನ್ನು:-

1) ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.
2) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿ, ವಾ.ಕ.ರ.ಸಾ.ನಿ, ಈ.ಕ.ರ.ಸಾ.ನಿ, ಇವರ ಮಾಹಿತಿಗಾಗಿಕಳುಹಿಸಲಾಗಿದೆ.

ಪ್ರತಿಯನ್ನು:-

1) ಘಟಕ ವ್ಯವಸ್ಥಾಪಕರು ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ,ಆರ್.ಪೇಟೆ ಹಾಗೂ ಪಾಂಡವಪುರ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ, ಹಾಗೂ ಹಾಗೂ ಘಟಕ ವ್ಯವಸ್ಥಾಪಕರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಸಂಚಾರ ಶಾಖೆಗೆ ನೀಡುವುದು ಹಾಗೂ ಸಂಧಾನ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.
2) ವಿಭಾಗೀಯ ಸಂಚಲನಾಧಿಕಾರಿ/ ಕಾನೂನು ಅಧಿಕಾರಿ/ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ವಿಭಾಗರವರು ಮೇಲೆ ತಿಳಿಸಲಾಗಿರುವ ಸಂಧಾನ ನಡೆಯುವ ದಿನಾಂಕ ಮತ್ತು ಸಮಯದಲ್ಲಿ ಹಾಜರಿರಲು ತಿಳಿಸಲಾಗಿದೆ ಹಾಗೂ ಸ.ಅ.ರವರು ಸದರಿ ಖಾಲಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಸಂಧಾನ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿ ನೀಡಲು ಕ್ರಮಕೈಗೊಳ್ಳುವುದು.

<u>ಅನುಬಂಧ-1</u>(Annexure-1)

ರಿಂದ:
ಶ್ರೀ ______________ ದೂರವಾಣಿ ಸಂ.______________

______________ ಇ-ಮೇಲ್ ವಿಳಾಸ:__________________________

______________

______________

ರಿಗೆ:
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ:
ಮಂಡ್ಯ ವಿಭಾಗ.

ಮಾನ್ಯರೇ,

ವಿಷಯ: ಯಾವುದೇ ರೀತಿಯಲ್ಲಿ **Defaulter ಆಗಿಲ್ಲದಿರುವ ಹಾಗೂ** ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಸಂಧಾನ ಪ್ರಕಟಣೆ ಸಂಖ್ಯೆ:14/2023-24 ದಿ:12.02.2024ರಂತೆ ____________ಬಸ್ ನಿಲ್ದಾಣದ ____________________ಮಳಿಗೆಗೆ ಸಂಧಾನದ ಮೂಲಕ ಅರ್ಜಿ ಸಲ್ಲಿಸಲು ಇಚ್ಛಿಸಿರುತ್ತೇನೆ. ನಾನು ಕ.ರಾ.ರ.ಸಾ.ನಿಗಮ/ ಬೆಂ.ಮ.ಸಾ.ಸಂ./ ವಾ.ಕ.ರ.ಸಾ.ಸಂ./ ಕ.ಕ.ರ.ಸಾ.ಸಂ. ಸೇರಿದ ಯಾವುದೇ ವಿಭಾಗದಲ್ಲಿ ವಾಣಿಜ್ಯ ಮಳಿಗೆಗಳ/ಜಾಹೀರಾತು ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ **Defaulter ಆಗಿರುವುದಿಲ್ಲ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲವೆಂದು** ಈ ಮೂಲಕ ದೃಢೀಕರಿಸುತ್ತೇನೆ. ನಾನು ಒದಗಿಸಿರುವ ಮಾಹಿತಿಯು ಸತ್ಯವೆಂದು ದೃಢೀಕರಿಸುತ್ತೇನೆ. ನಾನು ಒದಗಿಸಿರುವ ಮಾಹಿತಿಯು ಅಸತ್ಯವೆಂದು ದೃಢಪಟ್ಟಲ್ಲಿ ನಿಗಮವು ತೆಗೆದುಕೊಳ್ಳುವ ನಿರ್ಧಾರಗಳಿಗೆ ಬದ್ಧನಾಗಿರುತ್ತೇನೆಂದು ಪ್ರಮಾಣಿಕರಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ದಿ:

(ಸಹಿ ಮತ್ತು ಹೆಸರು)